ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2015

॥ ಧಿಯೋ ಯೋನಃ ಪ್ರಚೋದಯಾತ್ ॥

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-15 ಸಂಚಿಕೆ-8 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶ್ರೀ ಶಾರದಾ ಮಂಟಪದಲ್ಲಿ ವೇದಿಕೆಗಳು ಸಕ್ರಿಯ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ(ರಿ) ಕುಂಜಿಬೆಟ್ಟು ಉಡುಪಿ ಇದರ ನೂತನ ಆಡಳಿತ ಮಂಡಳಿಯು ಸಂಘದ ವತಿಯಿಂದ ನಡೆಯುತ್ತಿರುವ ವಿವಿಧ ಕಾರ್ಯಕ್ರಮಗಳನ್ನು 'ಯಶಸ್ವಿಯಾಗಿ ನಿರ್ವಹಿಸಲು ಹಾಗೂ ನಮ್ಮ ಸಮಾಜದ ಪ್ರತಿಯೊಬ್ಬರಿಗೂ ಈ ಕಾರ್ಯಕ್ರಮಗಳ ಪ್ರಯೋಜನವು ಪರಿಣಾಮಕಾರಿಯಾಗಿ ತಲುಪಲು ವಿವಿಧ ಕ್ಷೇತ್ರಗಳಲ್ಲಿ ಪರಿಣತಿಯುಳ್ಳ ನಮ್ಮವರನ್ನು ಆರಿಸಿ ವಿವಿಧ ವೇದಿಕೆಗಳನ್ನು ರಚಿಸಿದ್ದು ಆಯಾ ವೇದಿಕೆಗಳ ಮುಖ್ಯಸ್ಥರು ಹಾಗೂ ಕಾರ್ಯಕರ್ತರು ತಾ। 02–08–2015 ರಂದು ಶ್ರೀ ಶಾರದಾ ಮಂಟಪದಲ್ಲಿ ಜರಗಿದ ವೇದಿಕೆಗಳ ಸಭೆಯಲ್ಲಿ ತಮ್ಮ ಜವಾಬ್ದಾರಿಗಳನ್ನು ಸ್ವೀಕರಿಸಿದರು.'ಯುವ ಹಾಗೂ ಕ್ರೀಡಾ ವೇದಿಕೆ, ಮಹಿಳಾ ವೇದಿಕೆ, ಶಾರದಾ ವೇದಿಕೆ, ವಿದ್ಯಾರ್ಥಿ ವೇತನ, ಶಿಕ್ಷಣ ಹಾಗೂ ತರಬೇತಿ ವೇದಿಕೆ, ವೈದ್ಯಕೀಯ ವೇದಿಕೆ, ದೇವಸ್ಥಾನ ವೇದಿಕೆ, ಕಲೆ ಹಾಗೂ ಸಂಸ್ಕೃತಿ ವೇದಿಕೆ ಹಾಗೂ ಆಂತರಿಕ ಲೆಕ್ಕ ಪರಿಶೋಧನಾ ವೇದಿಕೆಗಳೆಂಬ ಎಂಟು ವೇದಿಕೆಗಳನ್ನು ರಚಿಸಲಾಯಿತು.

**ಯುವಜನ ಹಾಗೂ ಕ್ರೀಡಾ ವೇದಿಕೆ :**

ಸಂಘದ ಹಾಗೂ ದೇವಸ್ಥಾನದ ವಿವಿಧ ಕಾರ್ಯಕ್ರಮಗಳಿಗೆ ಕಾರ್ಯಕರ್ತರನ್ನು ಒದಗಿಸುವುದು, ಸಮಾಜದ ಬಾಂಧವರಿಗೆ ಅಗತ್ಯಬಿದ್ದಾಗ ಸಹಾಯಕ್ಕೆ ಧಾವಿಸುವುದು, ಶಾರದಾ ಟ್ರೋಫಿ ನಡೆಸುವುದು, ಶಾರದಾ ಮಂಟಪದ ಶುಚಿತ್ವವನ್ನು ಕಾಪಾಡುವುದು, ಪ್ರವಾಸವನ್ನು ಏರ್ಪಡಿಸುವುದು ಇತ್ಯಾದಿ ಜವಾಬ್ದಾರಿ ಈ ವೇದಿಕೆಗಿದೆ. ಇದರ ಸಂಚಾಲಕರಾಗಿ ಶ್ರೀ ಕರಂಬಳ್ಳಿ ವಸಂತ ರಾವ್ ಹಾಗೂ ಅಧ್ಯಕ್ಷರಾಗಿ ಶ್ರೀ ಕೃಷ್ಣರಾಜ ರಾವ್ ಉಂಡಾರು ಇವರು ನೇತೃತ್ವ ವಹಿಸಿಕೊಡಿದ್ದಾರೆ. ಶ್ರೀ ಕರಂದಾಡಿ ವಾಸುದೇವರಾವ್. ಶ್ರೀ ಟಿ. ಜಗದೀಶ ರಾವ್, ಶ್ರೀ ಬಿ. ಜಯರಾಮ ರಾವ್ ಇವರು ಸಕ್ರಿಯ ಸದಸ್ಯರಾಗಿದ್ದಾರೆ.

**ಮಹಿಳಾ ವೇದಿಕೆ :**

ಮಕ್ಕಳಿಗೆ ಹಾಗೂ ಮಹಿಳೆಯರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ದೇವಸ್ಥಾನದಲ್ಲಿ ನಿಯಮಿತವಾಗಿ ಭಜನೆ ಹಾಗೂ ಹೂವಿನ ಪೂಜೆ ನಡೆಸುವುದು, ವರ್ಷಕ್ಕೊಮ್ಮೆ ವರಮಹಾಲಕ್ಷ್ಮೀವ್ರತ ಹಾಗೂ ದುರ್ಗಾ ನಮಸ್ಕಾರ ಪೂಜೆಗಳನ್ನು ನಡೆಸುವುದು. ಈ ವೇದಿಕೆಯ ಕೆಲಸಗಳು. ಶ್ರೀಮತಿ ಉಷಾ ಶಾನುಭಾಗ್ ಇದರ ಸಂಚಾಲಕರು. ಶ್ರೀಮತಿ ಜಯಲಕ್ಷ್ಮೀ ಮುರಳೀಧರ್ ರಾವ್ ಇವರು ಇದರ ಅಧ್ಯಕ್ಷೆ. ಶ್ರೀಮತಿ ಉಷಾ ಮೋಹನ್ ದೇವ್ ಹಾಗೂ ಶ್ರೀಮತಿ ಶೀತಲ್ ರಾವ್ ಇದರ ಸದಸ್ಯೆಯರಾಗಿದ್ದಾರೆ.

**ಶ್ರೀ ಶಾರದಾ ವೇದಿಕೆ :**

ಶ್ರೀಶಾರದಾ ಪತ್ರಿಕೆ ನಮ್ಮ ಸಂಘದ ಮುಖವಾಣಿಯಾಗಿದೆ. ಕಳೆದ 15 ವರ್ಷಗಳಿಂದ ಪ್ರತೀ ತಿಂಗಳ ಹದಿನೈದನೇ ತಾರೀಖಿನಂದು ಬಿಡುಗಡೆಯಾಗುವ ಈ ಪತ್ರಿಕೆಯಲ್ಲಿ ಸಂಘದ ಚಟುವಟಿಕೆಗಳ ವರದಿ ಮಾತ್ರವಲ್ಲದೆ ನಮ್ಮ ಸಮಾಜಕ್ಕೆ ಸಂಬಂಧಿಸಿದ ಎಲ್ಲಾ ವರದಿಗಳು ಪ್ರಕಟವಾಗುತ್ತವೆ. ವರದಿಯೊಂದಿಗೆ ಲೇಖನ, ಕವನ, ಕಥೆ, ಚಿತ್ರ, ಚುಟುಕು, ಮಾಹಿತಿ ಸುದ್ದಿಗಳ ವೈವಿಧ್ಯದೊಂದಿಗೆ ಶಾರದಾ ಪತ್ರಿಕೆಯು ಆಕರ್ಷಕವಾಗಿ ಮೂಡಿಬರುತ್ತಿದ್ದು ಜನಪ್ರಿಯವಾಗಿದೆ. ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ ಇವರು ಇದರ ಸಂಚಾಲಕರಾಗಿದ್ದರೆ. ಶ್ರೀ ವೈ. ಮೋಹನ್ ರಾವ್ ಇದರ ಅಧ್ಯಕ್ಷರು. ಶ್ರೀ ಹೆಚ್.ಎನ್. ಶಾನುಭಾಗ್, ಶ್ರೀ ವೈ. ಪ್ರಕಾಶ್ ಕುಮಾರ್ ಹಾಗೂ ಶ್ರೀ ಟಿ. ಸುರೇಶ್ ರಾವ್ ಇವರು ಇದರ ಸದಸ್ಯರು.

**ವಿದ್ಯಾರ್ಥಿ ವೇತನ, ಶಿಕ್ಷಣ ಹಾಗೂ ತರಬೇತಿ ವೇದಿಕೆ :**

ನಮ್ಮ ಸಂಘದಿಂದ ಪ್ರತಿಭಾವಂತ ಹಾಗೂ ಆರ್ಥಿಕ ಸಹಾಯ ಅಗತ್ಯವುಳ್ಳ ಪದವಿಪೂರ್ವ ಹಾಗೂ ನಂತರದ ವಿದ್ಯಾರ್ಥಿಗಳಿಗೆ ಪ್ರತೀ ವರ್ಷ ವಿಜಯ ದಶಮಿಯಂದು ವಿದ್ಯಾರ್ಥಿ ವೇತನ ವಿತರಿಸಲಾಗುತ್ತಿದೆ. ವೇದ ಪಾಠ ಕಲಿಯುತ್ತಿರುವ ವಿದ್ಯಾರ್ಥಿಗಳಿಗೂ ಈ ಸೌಲಭ್ಯವಿದೆ. ಅತೀ ಹೆಚ್ಚು ಅಂಕಗಳಿಸಿದ ಎಸ್.ಎಸ್.ಎಲ್.ಸಿ, ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಹಾಗೂ ಪದವಿ ಪರೀಕ್ಷೆಯಲ್ಲಿ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಸ್ನಾತಕೋತ್ತರ ಪದವಿಯಲ್ಲಿ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗಳಿಗೆ ಶ್ರೀ ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ಪುರಸ್ಕಾರ ನೀಡಲಾಗುತ್ತಿದೆ. ಡಾ। ದಯಾನಂದ ಎಸ್. ರಾವ್ ಸಾಲ ವಿದ್ಯಾರ್ಥಿ ವೇತನದ ಸೌಲಭ್ಯವೂ ಇದೆ. ಈ ಎಲ್ಲಾ ವಿದ್ಯಾರ್ಥಿ ವೇತನಗಳಿಗೆ ಅರ್ಜಿ ಆಹ್ವಾನಿಸಿ, ಅರ್ಹರನ್ನು ಗುರುತಿಸಿ

(3ನೇ ಪುಟಕ್ಕೆ...)

## ಜಗದ್ಗುರುಗಳವರ ಚಾತುರ್ಮಾಸ್ಯ ವೃತ ಆರಂಭ

– ಶ್ರೀ ವೈ.ಮೋಹನ್ ರಾವ್

ಸ್ಥಾನಿಕ ಸಮಾಜವು ಕಳೆದ 30 ವರ್ಷಗಳಿಂದ ಚಾತುರ್ಮಾಸ್ಯ ಸಂದರ್ಭದಲ್ಲಿ ಶ್ರೀ ಶೃಂಗೇರಿ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಭೇಟಿಯನ್ನು ಪ್ರತೀವರ್ಷ ನಿಷ್ಠೆಯಿಂದ ಮಾಡುತ್ತಾ ಬಂದಿದೆ. ಈ ವರ್ಷ ಗಣೇಶ ಚತುರ್ಥಿಯ ಹಿಂದಿನ ಭಾನುವಾರ 13–09–2015 ರಂದು ಜಗದ್ಗುರುಗಳವರ ಚಾತುರ್ಮಾಸ್ಯ ಭೇಟಿ ಕಾರ್ಯಕ್ರಮದಲ್ಲಿ ಅವರ ಆಶೀರ್ವಾದವನ್ನು ಪಡೆಯುವ ಸದವಕಾಶ ಲಭಿಸಿದೆ. ಈ ಸಲ 31–07–2015ರಂದು ಯತಿ ಚಾತುರ್ಮಾಸ್ಯ ಪ್ರಾರಂಭ. ಅದೇ ದಿನವೇ ಗುರು ಪೂರ್ಣಿಮಾ ಮತ್ತು ವ್ಯಾಸ ಪೂಜಾ. ಅದೇ ದಿನ ತುಳುವರ ಆಟಿ ಹುಣ್ಣಿಮೆ.

"ನನ್ನ ಅತ್ಯಂತ ಪ್ರೀತಿಯ ಶಿಷ್ಯರಾದ ಸ್ಥಾನಿಕ ಬ್ರಾಹ್ಮಣ ಸಮಾಜದವರು ಪ್ರತೀ ವರ್ಷವೂ ಚಾತುಮಾಸ್ಯ ಅನುಷ್ಠಾನ ಸಂದರ್ಭದಲ್ಲಿ ಗುರುಗಳ ದರ್ಶನಕ್ಕಾಗಿ ಅವರ ಅಶೀರ್ವಚನಕ್ಕಾಗಿ ಶೃಂಗೇರಿಗೆ, ಇಲ್ಲದಿದ್ದರೆ ಗುರುಗಳು ಎಲ್ಲಿ ಇರುತ್ತಾರೋ ಅಲ್ಲಿಗೆ ಬಂದು ಅವರಿಂದ ಅನುಗ್ರಹವನ್ನು ಪಡೆಯುತ್ತಿದ್ದಾರೆ. ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೆ ಗುರುಗಳ ಅಶೀರ್ವಾದ ಇದ್ದೇ ಇರುತ್ತದೆ. ಮನುಷ್ಯನು ಜನ್ಮಕ್ಕೆ ಬಂದ ಮೇಲೆ ಗುರುಗಳಲ್ಲಿ ಭಕ್ತಿ ಹಾಗೂ ಭಗವಂತನಲ್ಲಿ ನಂಬಿಕೆ ಇಡಬೇಕು. ಅದೇ ರೀತಿ ಸ್ಥಾನಿಕ ಬ್ರಾಹ್ಮಣ ಸಮಾಜದವರು ಅನಾದಿ ಕಾಲದಿಂದಲೂ ಶೃಂಗೇರಿ ಪೀಠದ ಮೇಲೆ ಭಕ್ತಿ ಶ್ರದ್ಧೆಯಿಂದ ನಡೆದು ಕೊಳ್ಳುತ್ತಿದ್ದಾರೆ. ಇದರಿಂದ ಮನುಷ್ಯ ಜನ್ಮವು ಪಾವನವಾಗುತ್ತದೆ, ನೀವೆಲ್ಲರೂ ಒಗ್ಗಟ್ಟಿನಲ್ಲಿ ಇದೇ ರೀತಿ ಗುರುಗಳ ಸೇವೆಯನ್ನು ಸದಾ ನಡೆಸುವಂತಾಗಲಿ" ಎಂದು ಎಲ್ಲಾ ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೆ ಫಲಮಂತ್ರಾಕ್ಷತೆ ಇತ್ತು ಜಗದ್ಗುರುಗಳವರು ಆಶೀರ್ವಚಿಸುತ್ತಿದ್ದರು. ಹೀಗೆ ಚಾತುರ್ಮಾಸ್ಯ ಸಂದರ್ಭದಲ್ಲಿ ಶ್ರೀ ಶ್ರೀ ಗುರುಗಳವರು ಸ್ಥಾನಿಕ ಸಮಾಜದವರನ್ನು ಉದ್ದೇಶಿಸಿ ನುಡಿದದ್ದನ್ನು ನಾವು ಕೇಳಿದ್ದೇವೆ ಮತ್ತು ನೋಡಿದ್ದೇವೆ.

ನಾಲ್ಕು ತಿಂಗಳುಗಳ ವೃತ ಎಂಬುದು ಚಾತುರ್ಮಾಸ್ಯದ ಅರ್ಥ. ಒಂದು ಪಕ್ಷವನ್ನು ಒಂದು ತಿಂಗಳೆಂದು ಭಾವಿಸಿದಾಗ ಅದೇ ನಾಲ್ಕು ಪಕ್ಷಗಳು. ಪರಿವ್ರಾಜಕರಾದ ಯತಿಗಳು ಸ್ವಧರ್ಮದ ಪ್ರಕಾರ ದೇಶ ಸಂಚಾರ ಮಾಡುತ್ತಿರುತ್ತಾರೆ. ಮಳೆಗಾಲದ ಸಂದರ್ಭದಲ್ಲೂ ಅಹಿಂಸೆಯನ್ನು ಪಾಲಿಸಬೇಕಾಗುತ್ತದೆ. ಮಳೆಗಾಲದಲ್ಲಿ ದಾರಿ ಅನೇಕ ಸೂಕ್ಷ್ಮ ಜೀವಿಗಳಿಂದ ತುಂಬಿರುತ್ತದೆ. ಕೃಷಿಕರು ಕೃಷಿಯನ್ನು ಪ್ರಾರಂಭಿಸುತ್ತಾರೆ. ವಿವಿಧ ಸಸ್ಯಗಳು ಮೊಳಕೆಯೊಡೆದು ಭುವಿಯನ್ನು ಭೇದಿಸಿ ಹುಟ್ಟಿಕೊಳ್ಳುತ್ತದೆ. ಭೂಮಿಯೂ ಮಳೆಯಿಂದಾಗಿ ಮೃದುವಾಗುತ್ತದೆ. ಆದ್ದರಿಂದ ಆಗ ಸಂಚರಿಸುವುದು ಸಮ್ಮತವಲ್ಲ. ಆದ್ದರಿಂದ ಯತಿಗಳು ಚಾತುರ್ಮಾಸ್ಯ ವೃತವನ್ನು ಆರಂಭಿಸಲು ಸಂಕಲ್ಪಿಸುತ್ತಾರೆ. ಹೀಗಾಗಿ ಅಹಿಂಸಾಧರ್ಮ ಚಾತುರ್ಮಾಸ್ಯ ವೃತಕ್ಕೆ ಬುನಾದಿಯಾಗಿರುತ್ತದೆ.

ವ್ಯಾಸ ಪೂರ್ಣಿಮಾ ಅಥವಾ ಗುರುಪೂರ್ಣಿಮಾ ದಿನದಂದೇ ಚಾತುರ್ಮಾಸ್ಯ ವೃತ ಆರಂಭವಾಗುವುದು. ಭಗವಾನ್ ವೇದವ್ಯಾಸರು ಬ್ರಹ್ಮವಿದ್ಯೆಯನ್ನು ಉಪದೇಶಿಸಿದರು. ಅನಂತ ವೇದವನ್ನು ನಾಲ್ಕು ವಿಭಾಗಗಳನ್ನಾಗಿ ವಿಭಾಗಿಸಿದ್ದರಿಂದಲೇ ಅವರನ್ನು 'ವೇದವ್ಯಾಸ' ಎಂದು ಕರೆಯಲಾಗುತ್ತದೆ. ಗುರುಪೂರ್ಣಿಮೆಯಂದು ಪುಣ್ಯಭಾರತದ ಎಲ್ಲಾ ಸಂಪ್ರದಾಯಗಳ ಯತಿಪರಂಪರೆಯವರೂ ಅವರನ್ನು ವಿಶೇಷವಾಗಿ ಪೂಜಿಸುತ್ತಾರೆ. ವೃತಬದ್ಧರಾದ ಯತಿಗಳು ಆ ಸಮಯದಲ್ಲಿ ಅಧ್ಯಯನ ಅಧ್ಯಾಪನಗಳ ಮೂಲಕ, ಯಮ–ನಿಯಮಾದಿ ಯೋಗ ಸಾಧನೆಗಳ ಮೂಲಕ ಮತ್ತು ಶಾಸ್ತ್ರೋಕ್ತವೃತ ಉಪವಾಸಗಳಿಂದ ತಮ್ಮ ಮನಸ್ಸನ್ನು ಕ್ರೋಢೀಕರಿಸುವ ಸಾಧನೆಯಲ್ಲಿ ತೊಡಗುತ್ತಾರೆ.

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರುಗಳವರು ನಾಲ್ಕು ತಿಂಗಳುಗಳ ಕಾಲ ಒಂದೇ ಜಾಗದಲ್ಲಿ ಇರಲು ತಿಳಿಸಿ, ಅದಕ್ಕೆ ಕಾರಣವನ್ನು ಹೇಳಿ ಚಾತುರ್ಮಾಸ್ಯ ವ್ರತದ ಪ್ರಕ್ರಿಯೆಗಳನ್ನು ಪ್ರಾರಂಭಿಸುತ್ತಾರೆ. ಚಾತುರ್ಮಾಸ್ಯದ ಕಾಲದಲ್ಲಿ ಶ್ರೀಮಠದ ಶಿಷ್ಯರು ಯಥಾಶಕ್ತಿ ಗುರುಸೇವೆ ಮಾಡುತ್ತಾರೆ. ಶ್ರೀಮಠದ ಪರಂಪರಾಗತ ಶಿಷ್ಯರು, ಸಾಮಾಜಿಕರು ಎಲ್ಲರೂ ಗುರುಗಳ ದರ್ಶನ ಭಾಗ್ಯ ಪಡೆಯುತ್ತಾರೆ. ಚಾತುರ್ಮಾಸ್ಯ ನಿರತರಾದ ಗುರುಗಳವರ ಪಾದಪೂಜೆ, ಭಿಕ್ಷಾವಂದನೆ ಇತ್ಯಾದಿ ಸೇವೆಗಳನ್ನು ಸಮರ್ಪಿಸಿ ಗುರುಗಳವರಿಂದ ಆಶೀರ್ವಾದ ಪಡೆಯುತ್ತಾರೆ. ಶಾಸ್ತ್ರೋಕ್ತವಾಗಿ ಚಾತುರ್ಮಾಸ್ಯ ವೃತವನ್ನು ಆಚರಿಸುವ ಶ್ರೀ ಶೃಂಗೇರಿ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತಿತೀರ್ಥ ಮಹಾಸ್ವಾಮಿಗಳವರ ಮತ್ತು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳವರ ಕೃಪೆ ನಮಗೆ ಲಭಿಸಲಿ.

# ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

ಜ್ಞಾನ ಹಾಗೂ ಕರ್ಮ ಇವು ವಿದ್ಯೆಯ ಎರಡು ಭಾಗಗಳು. ಜ್ಞಾನವನ್ನು ಪಡೆದು ಅದರ ಪ್ರಕಾರ ಕರ್ಮಾಚರಣೆ ಮಾಡಿ ಶ್ರೇಯಸ್ಸನ್ನು ಪಡೆಯಬೇಕೆಂದು ಉಪನಿಷತ್ತುಗಳಲ್ಲಿ ಹೇಳಲ್ಪಟ್ಟಿದೆ. ಇದನ್ನು ನಾವು ಆಧುನಿಕ ಪದ್ಧತಿಯಲ್ಲಿರುವ ಥಿಯರಿ ಹಾಗೂ ಪ್ರಾಕ್ಟಿಕಲ್ ಎಂಬ ಕಲಿಕಾಕ್ರಮಕ್ಕೆ ಹೋಲಿಸಬಹುದು. ಥಿಯರಿಯನ್ನು ಮನದಟ್ಟಾಗಿ ಅಭ್ಯಸಿಸದೆ ಕೇವಲ ಪ್ರಾಕ್ಟಿಕಲ್‌ನ್ನು ಮಾತ್ರ ಕಲಿತರೆ ತಾವು ಕಲಿತ ವಿದ್ಯೆಯನ್ನು ಅನುಷ್ಠಾನಕ್ಕಿಳಿಸುವಾಗ ಅಧ್ವಾನಗಳಾಗುವುದು ಖಚಿತ. ಜ್ಞಾನವಿಲ್ಲದೇ ಆಚರಿಸಿದ ಕರ್ಮದ್ದೂ ಇದೇ ಗತಿ. ಶ್ರೀ ಶಂಕರಾಚಾರ್ಯರು ಈ ದೇಶದಲ್ಲಿ ಉದಯಿಸಿದಾಗ ವೈದಿಕ ಧರ್ಮದ್ದೂ ಇದೇ ಪಾಡಾಗಿತ್ತು. ತಾಳಮೇಳವಿಲ್ಲದ ಕರ್ಮಾಚರಣೆಯಿಂದಾಗಿ ಜನರು ಬೇಸತ್ತು ವೈದಿಕ ಧರ್ಮದಿಂದ ವಿಮುಖರಾಗತೊಡಗಿದ್ದರು. ಅಂತಹಾ ಸಂದರ್ಭದಲ್ಲಿ ಶ್ರೀ ಶಂಕರರು ವೇದ ಉಪನಿಷತ್ತುಗಳಿಗೆ ಅರ್ಥಪೂರ್ಣವಾದ ಭಾಷ್ಯಗಳನ್ನು ಬರೆದು, ದೇಶವಿಡೀ ಸಂಚರಿಸಿ ವಿದ್ವಾಂಸರುಗಳಿಗೆಲ್ಲಾ ತನ್ನ ತರ್ಕವನ್ನು ಮನಗಾಣಿಸಿ ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸಿದರು. ಅಷ್ಟು ಮಾತ್ರವಲ್ಲದೇ ಈ ಕಾರ್ಯವು ನಿರಂತರವಾಗಿ ನಡೆಯುತ್ತಿರಲೆಂದು ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿದರು. ಶ್ರೀ ಶೃಂಗೇರಿ ಶಾರದಾ ಪೀಠವೂ ಇವುಗಳಲ್ಲೊಂದು.

ಉತ್ತಮ ಆರೋಗ್ಯಕ್ಕಾಗಿ ಧ್ಯಾನವನ್ನು ನಿಮ್ಮ ದಿನಚರಿಯಲ್ಲಿ ಸೇರಿಸಿಕೊಳ್ಳಿರಿ ಎಂಬ ಮಾತನ್ನು ಈಗ ಆಧುನಿಕ ವೈದ್ಯರೂ ಹೇಳತೊಡಗಿದ್ದಾರೆ. ಧ್ಯಾನವೆಂಬುದು ಭಾರತೀಯ ಸಂಸ್ಕೃತಿಯನ್ನು ಉಸಿರಾಡುವವರಿಗೆಲ್ಲಾ ಪುಕ್ಕಟೆಯಾಗಿ ಬಂದ ಬಳುವಳಿಯಾದುದರಿಂದ ಅದು ನಮಗೆ ವಿಶೇಷವೆನಿಸುವುದಿಲ್ಲ. ಧ್ಯಾನವು ಶ್ರೀ ಶಂಕರಾಚಾರ್ಯರು ಬೋಧಿಸಿದ ಬ್ರಹ್ಮಜ್ಞಾನವೆಂಬ ವಿದ್ಯೆಯ ಉನ್ನತ ಹಂತದ ಮೊದಲನೆಯ ಮೆಟ್ಟಿಲು. ಯಾವುದೇ ವಿದ್ಯೆ ಗುರುಮುಖೇನ ಬಂದಲ್ಲಿ ಮಾತ್ರವೇ ಅದು ಮನನವಾಗುತ್ತದೆ. ಇದು ಬ್ರಹ್ಮಜ್ಞಾನಕ್ಕೂ ಅನ್ವಯಿಸುತ್ತದೆ. ಸ್ಥಾನಿಕ ಬ್ರಾಹ್ಮಣರು ಮೊದಲಿನಿಂದಲೂ ಶ್ರೀ ಶೃಂಗೇರಿ ಮಠದ ಶಿಷ್ಯರಾಗಿದ್ದು ಗುರುಗಳ ಆಜ್ಞಾನುವರ್ತಿಗಳಾಗಿಯೇ ಧರ್ಮಶಾಸ್ತ್ರಗಳನ್ನು ಅಭ್ಯಸಿಸಿ ಬ್ರಹ್ಮಜ್ಞಾನವನ್ನು ಪಡೆಯುತ್ತಿದ್ದರು ಹಾಗೂ ಅದನ್ನು ಅನುಷ್ಠಾನಿಸುತ್ತಿದ್ದರು. ಆದರೆ ಹಿಂದಿನ ಒಂದೆರಡು ಶತಮಾನಗಳಲ್ಲಿ ಕಾರಣಾಂತರಗಳಿಂದ ಕರಾವಳೀ ತೀರದ ನಮ್ಮವರಿಗೆ ಮಲೆನಾಡಿನಲ್ಲಿದ್ದ ಶೃಂಗೇರಿಯ ಸಂಪರ್ಕ ತಪ್ಪಿತ್ತು. ಹಾಗಾಗಿ ನಮ್ಮವರು ನಾನಾ ಅಪವಾದಗಳನ್ನು ಕೇಳಬೇಕಾಯಿತು, ಕಷ್ಟಗಳನ್ನು ಅನುಭವಿಸಬೇಕಾಯಿತು. ಆ ಸಂದರ್ಭದಲ್ಲಿ ನಮ್ಮವರು ಶ್ರೀ ನಟ್ಟೋಜಿ ಶಾರಶಿವರಾವ್ ಹಾಗೂ ಶ್ರೀ ಎಮ್.ವಿ.ಶಾಸ್ತ್ರಿರವರ ನೇತೃತ್ವದಲ್ಲಿ ನಿಯೋಗವನ್ನು ಶ್ರೀ ಶೃಂಗೇರಿ ಶಾರದಾ ಪೀಠದ ಆಗಿನ ಜಗದ್ಗುರುಗಳಾಗಿದ್ದ ಶ್ರೀ ಶ್ರೀ ಸಚ್ಚಿದಾನಂದ ಭಾರತಿತೀರ್ಥರಲ್ಲಿಗೆ ಒಯ್ದಾಗ ಅವರು ಮಠದ ದಾಖಲೆಗಳನ್ನು ಪರಿಶೀಲಿಸಿ ಸ್ಥಾನಿಕ ಬ್ರಾಹ್ಮಣರು ಮುಂಚಿನಿಂದಲೂ ಶೃಂಗೇರಿ ಮಠದ ಶಿಷ್ಯರೆಂದು ದೃಢೀಕರಿಸಿದ್ದು ಮಾತ್ರವಲ್ಲದೇ ಇನ್ನು ಮುಂದೆಯೂ ಮಠದ ಶಿಷ್ಯರಾಗಿದ್ದುಕೊಂಡು ಆ ಪ್ರಕಾರ ನಡೆದುಕೊಳ್ಳತಕ್ಕದೆಂದು ರಾಯಸವನ್ನಿತ್ತರು. ತಾ.8-01-1924ನೇ ತಾರೀಖಿನಂದು ಕೊಡಮಾಡಲ್ಪಟ್ಟ ಈ ರಾಯಸವು ಈಗಲೂ ನಟ್ಟೋಜಿ ಕುಟುಂಬದ ಶ್ರೀ ಶಾರದಾ ಪುಸ್ತಕ ಭಂಡಾರದಲ್ಲಿ ಸುರಕ್ಷಿತವಾಗಿದೆ (ಈ ಮಾಹಿತಿಯನ್ನಿತ್ತ ಶ್ರೀ ಎನ್.ಕೆ.ಜಗನ್ನಿವಾಸರಾಯರಿಗೆ ಧನ್ಯವಾದಗಳು) ಅಂದಿನಿಂದಲೂ ನಮ್ಮ ಸಮಾಜಬಾಂಧವರು ಶ್ರೀ ಶೃಂಗೇರಿ ಜಗದ್ಗುರುಗಳ ಮಾರ್ಗದರ್ಶನವನ್ನು ಪಡೆಯುತ್ತಿದ್ದಾರೆ ನಮ್ಮ ಸಮಾಜಬಾಂಧವರ ಅನುಕೂಲಕ್ಕಾಗಿ ಜಗದ್ಗುರುಗಳು ಚಾತುರ್ಮಾಸ್ಯದ ದಿನಗಳಲ್ಲಿ ಗಣೇಶ ಚತುರ್ಥಿಯ ಮುಂಚಿನ ಆದಿತ್ಯವಾರವು ಸ್ಥಾನಿಕ ಬಾಂಧವರು ತಮ್ಮನ್ನು ಭೇಟಿಯಾಗುವ ದಿನವೆಂದು ಬಹಳ ವರ್ಷಗಳ ಹಿಂದೆಯೇ ನಿಗದಿಪಡಿಸಿರುವರು. ಹಾಗೂ ಅಂದು ಜಗದ್ಗುರುಗಳು ಪ್ರವಚನದ ಆರಂಭದಲ್ಲಿ "ಪ್ರೀತಿಯ ಸ್ಥಾನಿಕ ಬ್ರಾಹ್ಮಣ ಬಾಂಧವರೇ" ಎಂದು ನಮ್ಮನ್ನು ಉದ್ದೇಶಿಸಿದ ನಂತರವೇ ಆಶೀರ್ವಚನ ನೀಡುವರು. ಜಗದ್ಗುರುಗಳು ನಮ್ಮನ್ನು ಇಷ್ಟೊಂದು ಪ್ರೀತಿಯಿಂದ ಆದರಿಸುವಾಗ ನಮ್ಮವರು ಆದಷ್ಟು ದೊಡ್ಡ ಸಂಖ್ಯೆಯಲ್ಲಿ ಗುರುಗಳ ಭೇಟಿಗಾಗಿ ತೆರಳಿ ಈ ಸಂಬಂಧವನ್ನು ಇನ್ನಷ್ಟು ಬಲಪಡಿಸಿಕೊಳ್ಳಬೇಕಲ್ಲವೇ?

ಇತಿಹಾಸ ಪುರಾಣ ಪ್ರಸಿದ್ಧವಾದ, ಈ ದೇಶವನ್ನಾಳಿದ ರಾಜ ಮಹಾರಾಜರೂ, ಸುಲ್ತಾನರೂ, ಬ್ರಿಟಿಷ್ ಅಧಿಕಾರಿಗಳೂ ಶ್ರದ್ಧಾಭಕ್ತಿ, ನಿಷ್ಠೆಯಿಂದ ನಡೆದುಕೊಂಡು ಬಂದ ಐತಿಹ್ಯವಿರುವ ಪ್ರತಿಷ್ಠಿತ ಶ್ರೀ ಶೃಂಗೇರಿ ಶಾರದಾ ಪೀಠ ಮಹಾ ಸಂಸ್ಥಾನದೊಂದಿಗಿನ ನಮ್ಮ ಗುರುಶಿಷ್ಯ ಸಂಬಂಧವು ಬೆಳೆಯುವುದರ ಜೊತೆಗೆ ಅದು ಮುಂದಿನ ಪೀಳಿಗೆಗೂ ಹಸ್ತಾಂತರವಾಗಬೇಕಲ್ಲವೇ? ಹಾಗಾಗಿ ನೆನಪಿಟ್ಟುಕೊಳ್ಳಿ, ಪ್ರತೀ ವರ್ಷವೂ ಗಣೇಶ ಚತುರ್ಥಿಯ ಮುಂಚಿನ ಆದಿತ್ಯವಾರವು (ಈ ವರ್ಷ 13-09-2015) ಸ್ಥಾನಿಕ ಬ್ರಾಹ್ಮಣರು ಗುರುಗಳ ಆಶೀರ್ವಾದ ಪಡೆಯಲು ಗುರುಗಳಿದ್ದಲ್ಲಿಗೆ ತೆರಳುವ ದಿನ. ಆ ದಿನದ ಭೇಟಿಗೆ ಯಾವುದೇ ಆಹ್ವಾನ ಬೇಕಿಲ್ಲ. ಅಂದು ತಾವೆಲ್ಲರೂ ಕುಟುಂಬ ಸಮೇತರಾಗಿ ಶೃಂಗೇರಿಗೆ ಬನ್ನಿ, ವಿಶೇಷವಾಗಿ ಮಕ್ಕಳನ್ನೂ ಕರೆದುಕೊಂಡು ಬನ್ನಿ ಹಾಗೂ ಅವರಿಗೂ ಗುರುಗಳ ಆಶೀರ್ವಾದದ ಸವಿಯನ್ನುಣಿಸಿ.

ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು ಶ್ರೀ ಶೃಂಗೇರಿ ಜಗದ್ಗುರುಗಳ ಆಶೀರ್ವಾದದೊಂದಿಗೆ ಪರಿವ್ರಾಜಕರಾಗಿ ಜಗದ್ಗುರುಗಳಿಂದ ಹೆಬ್ಬೂರು ಶ್ರೀ ಕೋದಂಡಾಶ್ರಮದ ಪೀಠಾಧಿಪತಿಗಳಾಗಿ ನಿಯೋಜಿತರಾಗಿರುವುದು ನಮಗೆಲ್ಲ ಹೆಮ್ಮೆ, ಗೌರವ ತರುವ ವಿಷಯ ಮಾತ್ರವಲ್ಲದೇ ಇದೊಂದು ಐತಿಹಾಸಿಕ ಘಟನೆಯಾಗಿದೆ, ಸ್ಥಾನಿಕ ಬ್ರಾಹ್ಮಣರು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಮುದ್ರೋಲ್ಲಂಘನವನ್ನೇ ಮಾಡಿದಂತಿದೆ. ಹೆಬ್ಬೂರು ಶ್ರೀಗಳು ಮಹಾನ್ ವಿದ್ವಾಂಸರು, ನಮ್ಮೆಲ್ಲರ ಬಗ್ಗೆ ವಿಶೇಷ ಕಾಳಜಿ ಹಾಗೂ ಪ್ರೀತಿ ಉಳ್ಳವರು. ಏಕಕಾಲದಲ್ಲಿ ಶ್ರೀ ಶೃಂಗೇರಿ ಜಗದ್ಗುರುಗಳ ಹಾಗೂ ಶ್ರೀ ಹೆಬ್ಬೂರು ಶ್ರೀಗಳವರ ಕೃಪಾಕಟಾಕ್ಷ, ಆಶೀರ್ವಾದ ಸ್ಥಾನಿಕ ಬ್ರಾಹ್ಮಣರಿಗಿರುವುದು ನಮ್ಮೆಲ್ಲರ ಅದೃಷ್ಟವಾಗಿದೆ. ಹಾಗಾಗಿ ಚಾತುರ್ಮಾಸ್ಯದ ಸಂದರ್ಭದಲ್ಲಿ ಉಭಯ ಶ್ರೀಗಳನ್ನೂ ಭೇಟಿಯಾಗಿ ಆಶೀರ್ವಾದ ಪಡೆಯೋಣ, ಸಂಬಂಧ ಬೆಸೆಯೋಣ ಹಾಗೂ ಧಾರ್ಮಿಕ ಉನ್ನತಿ ಸಾಧಿಸೋಣ.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ್ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ




**ಶ್ರೀಶಾರದಾ ಪತ್ರಿಕೆಯ ಓದುಗರಿಗೆ ಸ್ವಾತಂತ್ರ್ಯೋತ್ಸವದ ಶುಭಾಶಯಗಳು**

# ಆರ್ಷ ಪರಂಪರೆಯ ಪರಮೋಚ್ಚ ಪ್ರತಿನಿಧಿ ಯೋಗಿವರೇಣ್ಯ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು

- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು
ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ

ಜಗದ್ಗುರುಗಳು ತಮ್ಮ ದಿವ್ಯದೃಷ್ಟಿಯಿಂದ ಇದನ್ನು ಅರಿತು, ಮಹಾರಾಜರಿಗೆ 'ಅತಿಕ್ಷಿಪ್ರದಲ್ಲೇ ರಾಜ್ಯವು ನಿಮ್ಮ ಕೈಗೆ ಸೇರುವುದು. ಶ್ರೀ ಶಾರದಾ ಚಂದ್ರಮೌಳೀಶ್ವರರು ಮತ್ತು ಪಶುಪತಿನಾಥನು ನಿಮ್ಮನ್ನು ಅನುಗ್ರಹಿಸುತ್ತಾರೆ' - ಎಂದು ಪರಮಾನುಗ್ರಹಪೂರ್ವಕವಾದ ಶ್ರೀಮುಖವನ್ನು ಶೃಂಗೇರಿಯಿಂದ ಕಳುಹಿದ್ದರು. ಅದರಂತೆಯೇ ಕೆಲವೇ ದಿನಗಳಲ್ಲಿ ತ್ರಿಭುವನರಿಗೆ ಮತ್ತೆ ನೇಪಾಳ ರಾಜ್ಯವು ಸಿಕ್ಕಿತು.

1954ರ ಆಗಸ್ಟ್ 24ರಂದು ಭಾರತದ ಮೊದಲರಾಷ್ಟ್ರಪತಿ ಡಾ।ರಾಜೇಂದ್ರ ಪ್ರಸಾದರು ಮಹಾಮಹಿಮರಾದ ಜಗದ್ಗುರುಗಳವರ ಆಶೀರ್ವಾದ ಪಡೆಯಲು ಶೃಂಗೇರಿಗೆ ಬಂದಿದ್ದರು. ಶ್ರೀಗಳವರು ತಮ್ಮ ಉತ್ತರಾಧಿಕಾರಿ ಶ್ರೀ ಅಭಿನವ ವಿದ್ಯಾತೀರ್ಥರೊಂದಿಗೆ ಶ್ರೀ ಶಾರದಾಂಬಾ ದೇವಸ್ಥಾನದಲ್ಲಿ ಅವರಿಗೆ ಸಂದರ್ಶನ ನೀಡಿ, ಅನುಗ್ರಹಪೂರ್ವಕವಾಗಿ ಆಶೀರ್ವಚಿಸಿದರು.

### ಮತಾಂತರದ ಅವಶ್ಯಕತೆ ಇಲ್ಲ

ದಿನದ ಹೆಚ್ಚಿನ ಹೊತ್ತು ಅಂತರ್ಮುಖಿಗಳಾಗಿರುತ್ತಿದ್ದ ಶ್ರೀ ಚಂದ್ರಶೇಖರ ಭಾರತಿಯವರು ಒಮ್ಮೆ ಬಹಿರ್ಮುಖಸ್ಥಿತಿಗೆ ಬಂದಾಗ ಅವರ ಸಂದರ್ಶನಕ್ಕೆ ಕಾದು ನಿಂತಿದ್ದ ಒಬ್ಬ ಯೂರೋಪಿಯನ್ ಅವರ ಬಳಿಗೆ ಬಂದ. ಹಿಂದೂ ಧರ್ಮದ ಕುರಿತು ಅಲ್ಪ-ಸ್ವಲ್ಪ ತಿಳಿವು ಅವನಿಗಿತ್ತು. ಹಿಂದೂ ಧರ್ಮದ ಪ್ರಾಚೀನತೆ, ಅದರ ತತ್ತ್ವ-ಸಿದ್ಧಾಂತಗಳು-ಇತ್ಯಾದಿಗಳಿಂದ ಪ್ರೇರೇಪಿತನಾದ ಅವನು ಅದರ ಅನುಯಾಯಿಯಾಗಲು ಬಯಸಿದ್ದ. ಗುರುಗಳ ಸನ್ನಿಧಿಯಲ್ಲಿ ತನ್ನ ಬಯಕೆಯನ್ನು ತೋಡಿಕೊಂಡ. ಆಗ ಶ್ರೀಗಳವರು 'ನಿಮ್ಮ ತಂದೆ-ತಾಯಿಗಳ ಧರ್ಮ ಯಾವುದು'-ಎಂದು ಕೇಳಿದರು. ಅವನು 'ಕ್ರೈಸ್ತ ಧರ್ಮ' ಎಂದು ಹೇಳಿದ. 'ಆ ಧರ್ಮವನ್ನು ಚೆನ್ನಾಗಿ ಅಭ್ಯಾಸ ಮಾಡಿ ಸಾಕಷ್ಟು ಕಾಲ ಅನುಷ್ಠಾನ ಮಾಡಿದ್ದೀರಾ? - ಎಂದು ಪ್ರಶ್ನಿಸಿದರು, ಗುರುಗಳು. ಆತ "ಇಲ್ಲ; ಆಳವಾಗಿ ಅಭ್ಯಾಸ ಮಾಡಿಲ್ಲ. ಮೇಲಿಂದ ಮೇಲೆ ಅಷ್ಟಿಷ್ಟು ತಿಳಿದುಕೊಂಡಿದ್ದೇನೆ. ಅನುಷ್ಠಾನ ಮಾಡಲು ನನಗೆ ಅದರಲ್ಲಿ ಆಸಕ್ತಿಯೇ ಮೂಡಲಿಲ್ಲ"-ಎಂದು ಹೇಳಿದ. ಇದನ್ನು ಆಲಿಸಿದ ಸ್ವಾಮಿಗಳವರು "ಹಾಗಾದರೆ ಇನ್ನು ಕೆಲವು ವರ್ಷಗಳ ಕಾಲ ಅದನ್ನು ಆಳವಾಗಿ ಅಭ್ಯಾಸ ಮಾಡಿ. ಹಾಗೆಯೇ ಅದರಲ್ಲಿ ಹೇಳಿದ ಮಾರ್ಗದಲ್ಲಿ ಸೂಕ್ತ ಗುರುವಿನ ಮಾರ್ಗದರ್ಶನದಲ್ಲಿ ಪ್ರಾಮಾಣಿಕವಾಗಿ ಅನುಷ್ಠಾನ ಮಾಡಿ. ಆಗ ನಿಮಗೆ ನಿಮ್ಮ ಧರ್ಮದಲ್ಲಿಯೇ ಸಾಕ್ಷಾತ್ಕಾರ ಮಾರ್ಗ" ಗೋಚರಿಸುತ್ತದೆ. ಭಗವಂತ ನಿಮಗೆ ಕ್ರೈಸ್ತ ಕುಟುಂಬದಲ್ಲಿ ಜನ್ಮ ನೀಡಿರುವುದರಿಂದ ಅದೇ ಧರ್ಮದಲ್ಲಿ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸುವುದು ಸುಲಭ ಸಾಧ್ಯ. ಅದೇ ಭಗವಂತನ ಸಂಕಲ್ಪವಿದ್ದರೂ ಇರಬಹುದು. ಪ್ರಾಮಾಣಿಕ ಸಾಧಕನಿಗೆ ಸ್ವಧರ್ಮದಲ್ಲಿಯೇ ಸಾಕಷ್ಟು ಆಧ್ಯಾತ್ಮಿಕ ಅವಕಾಶಗಳಿರುತ್ತವೆ. ಅವನ್ನು ಆತ ಉಪಯೋಗಿಸಿಕೊಳ್ಳಬೇಕಷ್ಟೆ ಅದಕ್ಕಾಗಿ ಮತಾಂತರದ ಅಗತ್ಯವಿಲ್ಲ. ನೀವು ಕ್ರೈಸ್ತ ತಂದೆ-ತಾಯಿಗಳ ಮಗನಾಗಿ ಹುಟ್ಟಿದುದರಿಂದ, ಆ ಧರ್ಮದ ಅನೇಕ ಮೂಲಭೂತ ಸಂಸ್ಕಾರಗಳೂ, ಪರಿಕಲ್ಪನೆಗಳೂ ನಿಮ್ಮ ರಕ್ತದಲ್ಲಿ ಅಂತರ್ಗತವಾಗಿವೆ. ಅವನ್ನು ಕಿತ್ತು ಹಾಕಿ, ಹೊಸ ದಾರಿಯಲ್ಲಿ ನಡೆಯುವುದಕ್ಕಿಂತ ನೀವು ನಿಮ್ಮ ಮೂಲಭೂತಧರ್ಮದ ದಾರಿಯಲ್ಲಿಯೇ ಮುನ್ನಡೆಯುವುದು ಶ್ರೇಯಸ್ಕರ. ಆ ದಿಶೆಯಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿ ನೋಡಿ. ಅದು ವಿಫಲವಾದರೆ ಮತಾಂತರದ ಸಾಧ್ಯತೆಯನ್ನು ಪರಿಶೀಲಿಸಬಹುದು"-ಎಂದು ಹೇಳಿದರು.

ಸ್ವಾಮಿಗಳವರ ಈ ಮಾತನ್ನು ಕೇಳಿ ಆತ ಮೂಕವಿಸ್ಮಿತನಾದ. ಅವನಿಗೆ ಮಹಾನ್ ಸತ್ಯವೊಂದರ ಅರಿವು ಮೂಡಿತು. ಪ್ರಾಮಾಣಿಕವಾದ ಅಧ್ಯಾತ್ಮ ಸಾಧಕನಿಗೆ ಮತಾಂತರದ ಅವಶ್ಯಕತೆ ಇಲ್ಲ. ಅವನ ಮತದಲ್ಲಿಯೇ ಸಾಧನೆ ಮಾಡಿ ಸಿದ್ಧಿ ಪಡೆಯಬಹುದು.

### ಚಿಕಿತ್ಸೆಗೆ ಒಳಪಡುವ ರೋಗವೆ?

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ಹೆಚ್ಚು-ಹೆಚ್ಚು ಕಾಲ ಅವಧೂತ ಸ್ಥಿತಿಯಲ್ಲೇ ಇರುತ್ತಿದ್ದುದರಿಂದ ಅವರ ಆಹಾರ, ವಿಶ್ರಾಂತಿ, ಅನುಷ್ಠಾನ ಇತ್ಯಾದಿ ಯಾವುದೂ ಕ್ರಮಬದ್ಧವಾಗಿ ನಡೆಯುತ್ತಿರಲಿಲ್ಲ. ಅವರ ಆರೋಗ್ಯವನ್ನು ಪರೀಕ್ಷಿಸಬೇಕೆಂದು ಮನೋವೈದ್ಯರೊಬ್ಬರು ಶೃಂಗೇರಿಗೆ ಬಂದು, ಸುಮಾರು

(3ನೇ ಪುಟಕ್ಕೆ...)

Mobile : 9483242111
K.S.Rao : 9036443884
Tel : 0820-2523436



DEEPA ENTERPRISES
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

## ಶ್ರೀ ಶಾರದಾ ಮಂಟಪದಲ್ಲಿ ವೇದಿಕೆಗಳು ಸಕ್ರಿಯ

■...1ನೇ ಪುಟದಿಂದ

ವಿತರಿಸುವ ಜವಾಬ್ದಾರಿ ಈ ವೇದಿಕೆಯದ್ದು. ಅದಲ್ಲದೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ತರಬೇತಿ ಕಾರ್ಯಗಾರ, ವ್ಯಕ್ತಿತ್ವ ವಿಕಸನ ಕಾರ್ಯಾಗಾರ ಇತ್ಯಾದಿಗಳನ್ನೂ ಈ ವೇದಿಕೆ ನಡೆಸುತ್ತಿದೆ. ಶ್ರೀ ಎಸ್.ಎಮ್.ರಾವ್ ಇದರ ಸಂಚಾಲಕರು. ಡಾ| ವೈ. ರವೀಂದ್ರನಾಥ ರಾವ್ ಇದರ ಅಧ್ಯಕ್ಷರು. ಶ್ರೀ ಚಿದಂಬರ ಶಾನುಭಾಗ್, ಶ್ರೀ ಐ.ಕೆ.ಜಯಚಂದ್ರ, ಶ್ರೀ ಅರವಿಂದ ರಾವ್, ಶ್ರೀ ಪ್ರಭಾಕರ ಭಂಡಿ, ಶ್ರೀ ಶಶಿಧರ್ ಮಸ್ಕಿಬೈಲು ಇವರು ಇದರ ಸದಸ್ಯರಾಗಿದ್ದಾರೆ.

**ವೈದ್ಯಕೀಯ ವೇದಿಕೆ :**

ಉಚಿತ ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸುವುದು, ಬಡರೋಗಿಗಳಿಗೆ ಧನ ಸಹಾಯ, ವೈದ್ಯಕೀಯ ಮಾಹಿತಿ ಒದಗಿಸುವುದು, ರಕ್ತ ದಾನ ಇವೆಲ್ಲ ಈ ವೇದಿಕೆಯ ಕೆಲಸಗಳು. ಡಾ| ಬೈಕಾಡಿ ಸೂರ್ಯನಾರಾಯಣ ರಾವ್ ಇದರ ಸಂಚಾಲಕರು. ಡಾ| ಚೆಂಡುಕಳ ರಮೇಶ್ ರಾವ್ ಇದರ ಅಧ್ಯಕ್ಷರು. ಡಾ| ಅಮಿತಾ ಶೋಭಾ ರಾವ್, ಡಾ| ಗೀತಾ ರಾವ್, ಡಾ| ಅವಿನಾಶ್, ಡಾ| ಸನತ್, ಡಾ| ಲೋಕೇಶ್ ರಾವ್, ಡಾ| ಶೋಭಾ ರಾವ್ ಇದರ ಸದಸ್ಯರು.

**ದೇವಸ್ಥಾನ ವೇದಿಕೆ :**

ಶಾರದಾ ಮಂಟಪದ ಆವರಣದಲ್ಲಿ ಶ್ರೀ ಶಾರದಾ ದೇವಸ್ಥಾನವಿದೆ. ಉಡುಪಿಯಲ್ಲಿರುವ ಎರಡೇ ಎರಡು ಶ್ರೀ ಶಾರದಾ ದೇವಸ್ಥಾನಗಳಲ್ಲೊಂದಾಗಿ ನಮ್ಮ ಈ ದೇವಸ್ಥಾನವು ಅದ್ವಿತೀಯವಾಗಿದೆ. ಈ ದೇವಸ್ಥಾನದಲ್ಲಿ ಪ್ರತೀ ಸೋಮವಾರ ಸತ್ಸಂಗದವರಿಂದ ಭಜನೆ, ಮಂಗಳವಾರ ಸೌಂದರ್ಯಲಹರಿ ಪಾರಾಯಣ, ಪ್ರತೀ ಶುಕ್ರವಾರ ಲಲಿತಾ ಸಹಸ್ರನಾಮ ಹಾಗೂ ಪ್ರತೀ ಆದಿತ್ಯವಾರ ವೇದ ಪಾರಾಯಣ ನಡೆಯುತ್ತದೆ. ಪ್ರತೀ ಸಂಕಷ್ಟಹರ ಚತುರ್ಥಿಯಂದು ಸಾಮೂಹಿಕ ಗಣಹೋಮವೂ, ಪಂಚಮಿಯಂದು ನಾಗದೇವರಿಗೆ ತನುಸೇವೆಯೂ ಮೂಲಾ ನಕ್ಷತ್ರದಂದು ಶ್ರೀ ದೇವಿಗೆ ಸಹಸ್ರನಾಮಾರ್ಚನೆಯೂ ನಡೆಯುತ್ತದೆ. ನವರಾತ್ರಿ, ವಿಜಯದಶಮಿ, ಕಿರುನವರಾತ್ರಿಗಳಂದು ದೇವಸ್ಥಾನವು ದೀಪಾಲಂಕಾರ ಪುಷ್ಪಾಲಂಕಾರಗಳಿಂದ ಬೆಳಗುತ್ತಿರುತ್ತದೆ. ಮಹಾಶಿವರಾತ್ರಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಪ್ರತೀ ವರ್ಷ ಮೀನ ಸಂಕ್ರಮಣದಂದು (ಮಾರ್ಚ್ ತಿಂಗಳು) ಪ್ರತಿಷ್ಠಾಮಹೋತ್ಸವವನ್ನು ಆಚರಿಸಲಾಗುತ್ತದೆ. ಆಸಕ್ತರಿಗೆ ಸಂಧ್ಯಾವಂದನೆ ಹಾಗೂ ನಿತ್ಯಪೂಜಾವಿಧಿಗಳನ್ನು ಇಲ್ಲಿ ಕಲಿಸಲಾಗುತ್ತದೆ. ಈ ಎಲ್ಲಾ ಕೆಲಸಗಳನ್ನು ಶ್ರದ್ಧಾಭಕ್ತಿಯಿಂದ ದೇವಸ್ಥಾನ ವೇದಿಕೆಯವರು ಮಹಿಳಾ ವೇದಿಕೆಯವರ ಸಹಯೋಗದೊಂದಿಗೆ ನಡೆಸಿಕೊಂಡು ಬರುತ್ತಿದ್ದಾರೆ. ಶ್ರೀ ವೈ. ವಿಠಲ ರಾವ್ ಈ ವೇದಿಕೆಯ ಸಂಚಾಲಕರು. ಶ್ರೀ ಜಿ.ಕೆ.ಕೋಲ್ಪೆ ಇದರ ಅಧ್ಯಕ್ಷರು. ಶ್ರೀ ಬಿ.ವಾಸುದೇವ ರಾವ್, ಶ್ರೀ ಭಾಗ್ಯಚಂದ್ರ ರಾವ್, ಶ್ರೀ ಎ. ವಿ. ರಾವ್, ಶ್ರೀ ಭವಾನಿಶಂಕರ ರಾವ್, ಶ್ರೀ ಮೋಹನ್ ದೇವ್ ಈ ವೇದಿಕೆಯ ಸದಸ್ಯರಾಗಿದ್ದಾರೆ.

**ಕಲೆ ಹಾಗೂ ಸಾಂಸ್ಕೃತಿಕ ವೇದಿಕೆ:**

ಸಂಘದ ವಿವಿಧ ಕಾರ್ಯಕ್ರಮಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಯಕ್ಷಗಾನ ಸಾಹಿತ್ಯ ಸಂಗೀತ ಹಾಗೂ ಕಲೆಯ ಇತರ ಪ್ರಕಾರಗಳಲ್ಲಿ ನಮ್ಮ ಮಕ್ಕಳಿಗಿರುವ ಪ್ರತಿಭೆಯನ್ನು ಗುರುತಿಸಿ ತರಬೇತಿ ನೀಡುವುದು ಹಾಗೂ ಶಾರದಾ ಮಂಟಪದಲ್ಲಿ ಪ್ರತೀ ವಾರವೂ ನಡೆಯುತ್ತಿರುವ ಯಕ್ಷಗಾನ ಕಲಿಕಾ ಶಾಲೆಗೆ ಉತ್ತೇಜನ ನೀಡುವುದು ಈ ವೇದಿಕೆಯ ಕೆಲಸ. ಶ್ರೀ ಹೆರ್ಗ ನಿರಂಜನ ರಾವ್ ಇದರ ಸಂಚಾಲಕರು, ಶ್ರೀ ಪಿ. ಚಂದ್ರಶೇಖರ ರಾವ್, ಶ್ರೀಮತಿ ಇಂದಿರಾ ದಿವಾಕರ್, ಶ್ರೀ ಸುರೇಶ್ ಶಾನುಭಾಗ್ ಇದರ ಸದಸ್ಯರು.

**ಆಂತರಿಕ ಲೆಕ್ಕ ಪರಿಶೋಧನಾ ವೇದಿಕೆ:**

ಪ್ರತೀ ತಿಂಗಳು ಸಂಘದ ಹಾಗೂ ದೇವಸ್ಥಾನದ ಖರ್ಚುವೆಚ್ಚಗಳನ್ನು ಪರಿಶೀಲಿಸಿ ತಪ್ಪುಗಳಾಗಿದ್ದರೆ ಕಾರ್ಯಕಾರೀ ಸಮಿತಿಯ ಗಮನಕ್ಕೆ ತರುವುದು ಈ ವೇದಿಕೆಯ ಕೆಲಸ. ಕಳೆದ ಹಲವಾರು ವರ್ಷಗಳಿಂದ ಶ್ರೀ ಕರಂಬಳ್ಳಿ ವೆಂಕಟರಾವ್ ಇವರು ಈ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ. ಹಾಗಾಗಿ ಈ ಬಾರಿಯೂ ಅವರಿಗೇ ಈ ಜವಾಬ್ದಾರಿಯನ್ನು ವಹಿಸಲಾಗಿದೆ. ಈ ಎಲ್ಲಾ ವೇದಿಕೆಗಳು ಅತ್ಯಂತ ಕ್ಷಮತೆಯಿಂದ ಕಾರ್ಯನಿರ್ವಹಿಸಿ ಸಂಘಕ್ಕೆ ಒಳ್ಳೆಯ ಹೆಸರನ್ನು ತಂದುಕೊಡಲೆಂದು ಶ್ರೀ ಶಾರದಾ ಬಳಗವು ಶುಭ ಹಾರೈಸುತ್ತದೆ.

## ಮಹಿಳಾ ವೇದಿಕೆಯ ವತಿಯಿಂದ ಶ್ರೀ ಕ್ಷೇತ್ರ ಪೊಳಲಿ ಸಂದರ್ಶನ

ತಾ.09-07-2015ರಂದು ಉಡುಪಿಯ ನಮ್ಮ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಉಡುಪಿಯ ಮಹಿಳಾ ವೇದಿಕೆಯ ಸದಸ್ಯರು ಅಧಿಕ ಆಷಾಢ ಮಾಸದ ಪ್ರಯುಕ್ತ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನಕ್ಕೆ ಪ್ರವಾಸ ಹೋಗಿ, ಶ್ರೀ ಲಲಿತಾ ಸಹಸ್ರನಾಮ ಪಾರಾಯಣ ಮಾಡಿ, ಪೂಜಾ ಸೇವಾದಿಗಳನ್ನು ಮಾಡಿಸಿ ಪುನೀತರಾದರು. ಬೆಳಗ್ಗಿನ ಉಪಹಾರ ಹಾಗೂ ಮಧ್ಯಾಹ್ನದ ಪ್ರಸಾದ ಭೋಜನವನ್ನು ಶ್ರೀ ದೇವಸ್ಥಾನದ ವತಿಯಿಂದ ಶ್ರೀ ಶಿವರಾಯ ನಟ್ಟೋಜಿಯವರು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿ, ಮಂಡಳಿಯವರಿಂದ ಪ್ರಶಂಶಿಸಲ್ಪಟ್ಟರು. ದೇವಳದ ಸಮೀಪವಿರುವ "ಶ್ರೀ ರಾಮಕೃಷ್ಣ ಮಠ"ವನ್ನು ಸದಸ್ಯರೆಲ್ಲರೂ ವೀಕ್ಷಿಸಿ, ಅಲ್ಲಿಯ ಶುಚಿತ್ವ ಹಾಗೂ ವ್ಯವಸ್ಥೆಯನ್ನು ಮೆಚ್ಚಿದರು. ಹಿಂದಿರುಗುವಾಗ ದಾರಿಯಲ್ಲಿ "ಶ್ರೀ ಕ್ಷೇತ್ರ ಕಟೀಲು" ಮತ್ತು "ಮುಂಡ್ಕೂರು ಕ್ಷೇತ್ರ"ವನ್ನು ಸಂದರ್ಶಿಸಿ ಧನ್ಯರಾದರು. ಶಾರದಾ ವೇದಿಕೆಯ ಮಹಾಪೋಷಕರಾದ ಶ್ರೀ ಕೋಲ್ಪೆ ಗೋಪಾಲಕೃಷ್ಣರಾಯರು ಈ ಪ್ರವಾಸದ ಮಾಗದರ್ಶಕರಾಗಿದ್ದರು.

## ಆರ್ಷ ಪರಂಪರೆಯ .......

■...2ನೇ ಪುಟದಿಂದ

ಹದಿನೈದು ದಿನಗಳ ಕಾಲ ಗುರುಗಳ ಚಲನ-ವಲನ, ವರ್ತನೆ, ಶಿಷ್ಯರೊಂದಿಗೆ ಆಡುವ ಮಾತು-ಮೊದಲಾದವುಗಳನ್ನೆಲ್ಲ ಗಮನವಿಟ್ಟು ನೋಡುತ್ತಿದ್ದರು. ತಾವು ಯಾರೆಂದು ಅವರು ಗುರುಗಳಿಗೆ ಹೇಳಿರಲಿಲ್ಲ. ಕೊನೆಗೂ ಅವರಿಗೆ ಗುರುಗಳ ರೋಗವೇನೆಂಬುದು ಗೊತ್ತೇ ಆಗಲಿಲ್ಲ. ಒಂದು ದಿನ ಆ ವೈದ್ಯರು ಗುರುಗಳ ಬಳಿಗೆ ಹೋಗಿ 'ನಾಳೆ ಊರಿಗೆ ಹೋಗುತ್ತೇನೆ. ತಾವು ಆಶೀರ್ವದಿಸಬೇಕು' ಎಂದು ಹೇಳಿ ಸಾಷ್ಟಾಂಗ ನಮಸ್ಕಾರ ಮಾಡಿದರು.

ಆಗ ಗುರುಗಳು ಅವರತ್ತ ಮಂದಹಾಸಬೀರಿ 'ಏನು ಊರಿಗೆ ಹೊರಟಿರಾ? ನೀವು ಬಂದ ಕೆಲಸ ಮುಗಿಯಿತೆ?'-ಎಂದು ಕೇಳಿದರು. ಆ ವೈದ್ಯರು ಆಶ್ಚರ್ಯದಿಂದ ಮೂಕರಾಗಿ, ತಲೆಬಾಗಿ ನಿಂತರು. ಗುರುಗಳು ಅವರನ್ನು ಗಮನಿಸಿ, ನಮ್ಮನ್ನು ಪರೀಕ್ಷಿಸಲು ಬಂದವರಲ್ಲವೆ? ನಮ್ಮದು ನಿಮ್ಮ ಚಿಕಿತ್ಸೆಗೆ ಒಳಪಡುವ ರೋಗವೆ? ಎಂದರು. ಆ ವೈದ್ಯರು ತಲೆ ತಗ್ಗಿಸಿಕೊಂಡು, ಮತ್ತೊಮ್ಮೆ ಸಾಷ್ಟಾಂಗ ಪ್ರಣಾಮ ಮಾಡಿ' ಸ್ವಾಮಿಗಳದ್ದಲ್ಲ; ನನ್ನ ರೋಗ ಗುಣವಾಯಿತು'- ಎಂದು ಮನಸ್ಸಿನಲ್ಲಿಯೇ ಅಂದುಕೊಂಡು ನಡೆದರಂತೆ. ತ್ರಿಕಾಲಜ್ಞಾನಿಗಳಾದ ಗುರುಗಳ ಸಮ್ಮುಖದಲ್ಲಿ ಇಂತಹ ಅನೇಕ ಘಟನೆಗಳು ನಡೆದಿರುವ ಬಗ್ಗೆ ಉಲ್ಲೇಖಗಳಿವೆ.

**ಆರ್ಷ ಪರಂಪರೆಯ ಪರಮೋಚ್ಚ ಪ್ರತಿನಿಧಿ**

ಜಗದ್ಗುರು ಚಂದ್ರಶೇಖರ ಭಾರತೀ ಸ್ವಾಮಿಗಳವರು ಜೀವಿತಕಾಲದಲ್ಲೇ ಬ್ರಹ್ಮಸಾಕ್ಷಾತ್ಕಾರ ಪಡೆದು ಜೀವನ್ಮುಕ್ತ ಸ್ಥಿತಿಯನ್ನು ತಲುಪಿದ್ದ ಮಹಾನ್ ಚೇತನರು, ಆತ್ಮಜ್ಞಾನದ ತುರೀಯಾವಸ್ಥೆಯನ್ನು ತಲುಪಿದ ವ್ಯಕ್ತಿಗೆ 'ನೈಷ್ಕರ್ಮ್ಯಸಿದ್ಧಿ' ಲಭಿಸುತ್ತದೆ ಎಂದು ವೇದಾಂತ ಶಾಸ್ತ್ರ ಹೇಳುತ್ತದೆ. ಅಂಥವರಿಗೆ ಕೊಡಲೇಬೇಕಾದ ಯಾವುದೇ ಲೌಕಿಕ ಅಥವಾ ಧಾರ್ಮಿಕ ಕರ್ತವ್ಯಗಳಿರುವುದಿಲ್ಲ. ವಿಧಿ-ನಿಷೇಧಗಳೂ ಅವರಿಗೆ ಅನ್ವಯಿಸುವುದಿಲ್ಲ. (ನಿಸ್ತ್ರೈಗುಣ್ಯೇ ಪಥಿ ವಿಚರತಃ ಕೋ ವಿಧಿಃ ಕೋ ನಿಷೇಧಃ). ಅಂಥವರು ಆತ್ಮಾರಾಮರಾಗಿ ಅಂತರ್ಮುಖ ಸ್ಥಿತಿಯಲ್ಲಿರುವುದೇ ಹೆಚ್ಚು. ಎಲ್ಲೋ ಅಪರೂಪಕ್ಕೊಮ್ಮೆ ಬಹಿರ್ಮುಖರಾದರೆ ಅದು ಶಿಷ್ಯರ, ಜಿಜ್ಞಾಸುಗಳ, ಅಭಿಮಾನಿಗಳ ಪುಣ್ಯ ವಿಶೇಷ. ಪವಿತ್ರಭಾರತದ ಆರ್ಷ ಪರಂಪರೆಯ ಪರಮೋಚ್ಚ ಪ್ರತಿನಿಧಿಗಳಾದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಹಾಗಿದ್ದರು.

**ಮಹಾಪ್ರಸ್ಥಾನ**

ಅಂದು ಜಯನಾಮ ಸಂವತ್ಸರದ ಭಾದ್ರಪದ ಅಮಾವಾಸ್ಯೆ (29-9-1954) ಬ್ರಾಹ್ಮಿಮುಹೂರ್ತಕ್ಕೆ ಮುಂಚೆಯೇ ಗುರುಗಳು ಸ್ನಾನಕ್ಕಾಗಿ ತುಂಗಾನದಿಯತ್ತ ನಡೆದರು. ಪರಿಚಾರಕರು ಸ್ನಾನಕ್ಕೆ ಬಿಸಿ ನೀರು ಸಿದ್ಧ ಮಾಡಿದ್ದೇವೆಂದು ವಿಜ್ಞಾಪಿಸಿದರು. ಆದರೆ ಗುರುವರ್ಯರು' "ಇಂದು ಪರ್ವದಿನವಲ್ಲವೆ? ನದಿಯಲ್ಲೇ ಸ್ನಾನ ಮಾಡುವೆನು" ಎಂದು ಹೇಳಿ ತುಂಗಾನದಿಯತ್ತ ಹೆಜ್ಜೆ ಹಾಕಿದರು. ಆಗ ಮಳೆಗಾಲ ತುಂಗೆಯು ಮೈದುಂಬಿ ಹರಿಯುತ್ತಿದ್ದಳು. ಶ್ರೀಗಳವರು ತುಂಬಿ ಹರಿಯುತ್ತಿದ್ದ ಪ್ರವಾಹವನ್ನು ನೋಡುತ್ತ ಭಾವುಕರಾಗಿ ನೀರಿಗಿಳಿದರು. ಸ್ನಾನ ಸಂಕಲ್ಪವನ್ನು ಮಾಡಿ, ಪೂರ್ವಾಭಿಮುಖವಾಗಿ ನಿಂತರು. ಪ್ರಾಣಾಯಾಮ ಮಾಡಿ, ಬ್ರಹ್ಮರಂಧ್ರದ ಮೂಲಕ ಪ್ರಾಣವನ್ನು ಹೊರಹೊಮ್ಮಿಸಿ, ತಮ್ಮ ಮೂಲನೆಲೆಗೆ ಮರಳಿದರು. ಆ ದಿವ್ಯ ಚೇತನವು ವಿಶ್ವವ್ಯಾಪಕವಾದ ಮಹಾಚೇತನದಲ್ಲಿ ಸೇರಿದಾಗ, ಪಂಚಭೌತಿಕವಾದ ದೇಹವು ತುಂಗೆಯಲ್ಲುರುಳಿತು. ಯೋಗಿವರೇಣ್ಯರಾದ ಚಂದ್ರಶೇಖರ ಭಾರತೀ ಸ್ವಾಮಿಗಳ ಜೀವಾತ್ಮವು ಪರಮಾತ್ಮನಲ್ಲಿ ಲೀನವಾಯಿತು.

ನಮ್ಮ ನೆಲದ ಹೆಮ್ಮೆಯ ಕೊಡುಗೆಯಾದ ವೇದಾಂತ ಶಾಸ್ತ್ರದಲ್ಲಿ ಉಕ್ತವಾಗಿರುವ ಜೀವಾತ್ಮ-ಪರಮಾತ್ಮರ ಏಕತೆಯನ್ನು ಸಾಧಿಸಿ ತೋರಿಸಿದವರಿದ್ದರೆ ಅವರು ಜೀವನ್ಮುಕ್ತರಾದ ಯೋಗಿವರೇಣ್ಯ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರು. ಅವರ ಸಂಸ್ಮರಣೆ ಪುಣ್ಯಪ್ರದ ಮುಕ್ತಿದಾಯಕ.



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ
ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.
ವೇದಮೂರ್ತಿ ಚಿದಾನಂದ ಭಟ್
#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010
ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ಮೊಬೈಲ್- 9886629697, 9986119865

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

## ಆಟಿಡೊಂಜಿ ದಿನ : ಆಟ-ಕೆಸರಾಟ

ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬೆಳ್ತಂಗಡಿ ಇದರ ವತಿಯಿಂದ ದಿನಾಂಕ 18-07-2015ನೇ ಶನಿವಾರ ಸಾಯಂಕಾಲ "ಶ್ರೀ ಸುಬ್ಬರಾಯ ಪ್ರತಿಷ್ಠಾನ ಕಿಲ್ಲೂರು" ಬಂಗಾಡಿ ಇದರ ಸಹಯೋಗದಿಂದ ಶ್ರೀ ಸಂತೋಷ್ ಕುಮಾರ್ ಕಿಲ್ಲೂರು ಇವರ ಹಿರಿಯರ ಪುರಾತನ ಮನೆಯಲ್ಲಿ ನಮ್ಮ ಸಭಾದ ಈ ವರ್ಷದ ನೂತನ ಕಾರ್ಯಕ್ರಮ "ಆಟಿಡೊಂಜಿದಿನ" ವನ್ನು ಆಚರಿಸಲಾಯಿತು. ಸಾಯಂಕಾಲ 4 ಗಂಟೆಗೆ ನಡೆದ ಚಿಕ್ಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಕಿಲ್ಲೂರು ಮನೆಯ ಯಜಮಾನರಾದ ಶ್ರೀ ಬಿ.ಕೆ. ಸಂತೋಷ್ ಕುಮಾರ್ ದೀಪ ಬೆಳಗಿಸಿ ಶುಭ ಹಾರೈಸಿದರು. ಶ್ರೀಮತಿ ಗೀತಾ ರಮಾನಂದ ರಾವ್‌ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ವೇದಿಕೆಯಲ್ಲಿ ಅಧ್ಯಕ್ಷರಾದ ಶ್ರೀ ಪಿ.ಲಕ್ಷ್ಮೀನಾರಾಯಣ ರಾವ್, ಉಪಾಧ್ಯಕ್ಷ ಡಾ| ಶ್ಯಾಮರಾವ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಶಾಂತಾ ಸುರೇಶ್, ಕಾರ್ಯದರ್ಶಿ ಸುಮಂಗಲ ಪ್ರಶಾಂತ್, ಸಭಾದ ಕಾರ್ಯದರ್ಶಿ ಶ್ರೀಪತಿರಾವ್ ಕೊಕ್ರಾಡಿ ಉಪಸ್ಥಿತರಿದ್ದರು. ನಂತರ ನಮ್ಮ ಪುರಾತನ ಆಟಗಳಾದ ಚನ್ನೆಮಣೆ, ಕವಡೆ, ಚೌಕಬಾರಾ, ಉಯ್ಯಾಲೆ ಕಂಬದ ಆಟ, ಜೂಜಾಟ, ಲೂಡೋ, ಕೇರಂ, ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮ, ಭಜನೆ ನಂತರ ಮನೆಯ ದೇವರಾದ ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ಮಂಗಳಾರತಿ ನಡೆದು ಪ್ರಸಾದ ಸ್ವೀಕರಿಸಿ ರಾತ್ರಿಯ ಊಟದಲ್ಲಿ ಹಿರಿಯರು ಆಟಿ ತಿಂಗಳಲ್ಲಿ ಸೇವಿಸುತ್ತಿದ್ದ ಪತ್ರೊಡೆ, ಶ್ಯಾವಿಗೆ, ಕೊಟ್ಟಿಗೆ, ಅರಸಿನ ಎಲೆ ಕಡುಬು, ಹಲಸಿನ ಹಣ್ಣಿನ ಗಟ್ಟಿ, ಉಪ್ಪಿನ ಸೋಳೆಯ ಉಂಡುಲಗಾ, ಹಲಸಿನ ಹಣ್ಣಿನ ಪಾಯಸ, ಕುಚ್ಚಲಕ್ಕಿ ಗಂಜಿ, ನೀರಿನ ಮಾವಿನ ಕಾಯಿ ಚಟ್ನಿ, ಸೊಂಜಕ್ ಸೊಪ್ಪಿನ ಪಲ್ಯ, ಗಟ್ಟಿ ಮೊದಲಾದ ತಿನಸುಗಳನ್ನು ಮಾಡಿ ಬಡಿಸಲಾಯಿತು. ಸಭಾದ ನಿರ್ದೇಶಕರಾದ ಶ್ರೀ ಉಮೇಶ ರಾವ್ ಮತ್ತು ಸಂತೋಷ್ ಕುಮಾರ್ ದಂಪತಿಗಳ ಸಹಕಾರದಿಂದ ಯಶಸ್ವಿಯಾಗಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಶ್ರೀ ಬಿ.ಕೆ ಧನಂಜಯ ರಾವ್‌ರವರು ಎಲ್ಲರನ್ನು ಸ್ವಾಗತಿಸಿ ಇಡೀ ಕಾರ್ಯಕ್ರಮವನ್ನು ಮುನ್ನಡೆಸಿಕೊಟ್ಟರು.

ಮರುದಿನ ದಿನಾಂಕ 19-07-2015ನೇ ರವಿವಾರ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭೆ ಬೆಳ್ತಂಗಡಿ ವತಿಯಿಂದ ಬಂಗಾಡಿ ಕಿಲ್ಲೂರು ಹತ್ತಿರದ "ಮಿತ್ರ ಬಾಗಿಲು ಗ್ರಾಮದ ಕೊಡಂಗೆಬೈಲು ಮನೆಯ ಶ್ರೀ ಸೋಮಶೇಖರ ರಾವ್ ದಂಪತಿಗಳ ಸಹಯೋಗದಿಂದ ಕೃಷ್ಣ ಬಲರಾಮ ಗದ್ದೆಯಲ್ಲಿ ಆಟ ಕೆಸರಾಟವನ್ನು ಆಯೋಜಿಸಲಾಗಿತ್ತು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ಬಿ.ಕೆ ಸುಬ್ಬರಾವ್‌ರವರು ದೀಪಬೆಳಗಿಸಿ ಶುಭ ಹಾರೈಸಿದರು. ವೇದಿಕೆಯಲ್ಲಿ ಶ್ರೀ ಸೋಮಶೇಖರ ರಾವ್ ದಂಪತಿಗಳು, ಹಿರಿಯರಾದ ಪಿ.ಎಸ್. ಚಂದ್ರಶೇಖರ ರಾವ್, ಉಪಾಧ್ಯಕ್ಷರಾದ ಡಾ| ಶ್ಯಾಮರಾವ್, ಮಹಿಳಾವೇದಿಕೆ ಅಧ್ಯಕ್ಷೆ ಶ್ರೀಮತಿ ಶಾಂತಾ ಸುರೇಶ್, ಯುವ ವೇದಿಕೆ ಕಾರ್ಯದರ್ಶಿ ಶ್ರೀ ಕೃಷ್ಣಕುಮಾರ್, ಸಭಾದ ಕಾರ್ಯದರ್ಶಿ ಕೊಕ್ರಾಡಿ ಶ್ರೀಪತಿ ರಾವ್ ಉಪಸ್ಥಿತರಿದ್ದರು. ಜೊತೆ ಕಾರ್ಯದರ್ಶಿ ವಸಂತರಾವ್ ಕೊಕ್ರಾಡಿಯವರು ಕಾರ್ಯಕ್ರಮ ನಿರ್ವಹಿಸಿದ್ದರು. ಸಮಾಜದ ಸುಮಾರು 125ಕ್ಕಿಂತಲೂ ಹೆಚ್ಚು ಜನರು ಬೆಳಗಿನ ಉಪಹಾರದ ನಂತರ ಕೆಸರು ಗದ್ದೆಯಲ್ಲಿ ಐದು ಕಾಲಿನ ಓಟ 100 ಗಜ ಓಟ, ಹಗ್ಗ ಜಗ್ಗಾಟ, ಕಬ್ಬಡಿ, ವಾಲಿಬಾಲ್, ತ್ರೋಬಾಲ್ ನಿಧಿ ಹುಡುಕಾಟ, ಕಾಲುಚೆಂಡಾಟ ಮೊದಲಾದ ಬೇರೆ ಬೇರೆ ಆಟಗಳನ್ನು ಮಕ್ಕಳಿಗೆ, ವಯಸ್ಕರಿಗೆ, ಹಿರಿಯರಿಗೆ ಆಡಿಸಲಾಯಿತು. ಸಾಯಂಕಾಲ 4 ಗಂಟೆಗೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಿತು. ಉಜಿರೆಯ ದಿಶಾ ಫುಡ್ ಪ್ರಾಡಕ್ಟ್‌ನ ದಿನೇಶ್ ರಾವ್‌ರವರು ಕಾರ್ಯಕ್ರಮದ ಪ್ರಾಯೋಜಕ ರಾಗಿದ್ದರು. ಶ್ರೀ ಬಿ.ಕೆ ಧನಂಜಯ ರಾವ್‌ರವರ ಮುಂದಾಳತ್ವದಲ್ಲಿ ಎಲ್ಲರೂ ಕೆಸರಿನಲ್ಲಿ ಬ್ಯಾಂಡ್‌ಸೆಟ್‌ನ ಸಂಗೀತದಲ್ಲಿ ಮಿಂದೆದ್ದರು. ಸಭಾದ ನಿರ್ದೇಶಕರರಾದ ಶ್ರೀ ರಘು ಚಂದ್ರರಾವ್, ದಿನೇಶ್ ರಾವ್, ಸದಾಶಿವ ರಾವ್, ಶಂಕರ ನಾರಾಯಣ್ ರಾವ್, ಜಯಪ್ರಕಾಶ್ ರಾವ್, ಸತೀಶ್‌ರಾವ್ ಆಟೋಟಗಳನ್ನು ನಡೆಸಿಕೊಟ್ಟರು.

ವರದಿ : ಕೆ.ಶ್ರೀಪತಿ ರಾವ್

## ಮುನಿಯಾಲು ಲಯನ್ಸ್ ಕ್ಲಬ್‌ನ ಅಧ್ಯಕ್ಷರಾಗಿ ಡಾ| ಸುದರ್ಶನ್ ಹೆಬ್ಬಾರ್

ಕಾರ್ಕಳ ತಾಲೂಕು ಮುನಿಯಾಲು ಗ್ರಾಮೀಣ ಪ್ರದೇಶದ ಮೂವತ್ತೆರಡು ಸದಸ್ಯರೊಂದಿಗೆ ಮಾದರಿಯಾಗಿ ಕಾರ್ಯಾಚರಿಸುತ್ತಿರುವ 'ಮುನಿಯಾಲು ಲಯನ್ಸ್ ಕ್ಲಬ್'ನ ಅಧ್ಯಕ್ಷರಾಗಿ ಡಾ| ಸುದರ್ಶನ್ ಹೆಬ್ಬಾರ್ ಅಧಿಕಾರ ಸ್ವೀಕರಿಸಿದರು.

ತಾ.12-07-2015ನೇ ಆದಿತ್ಯವಾರ ಮುನಿಯಾಲಿನ ಮಾರಿಯಮ್ಮ ದೇವಸ್ಥಾನದ ವಠಾರದಲ್ಲಿ ಲಯನ್ಸ್ ಗವರ್ನರ್ ಶ್ರೀ ಈಶ್ವರ.ಜಿ.ಶೆಟ್ಟಿಯವರು ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ನೆರವೇರಿಸಿದರು.

ಡಾ| ಸುದರ್ಶನ ಹೆಬ್ಬಾರರವರು ಕಳೆದ 13 ವರ್ಷಗಳಿಂದ ಮುನಿಯಾಲು ಗ್ರಾಮದಲ್ಲಿ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಮುನಿಯಾಲು ಶ್ರೀ ರಾಮಕೃಷ್ಣ ಹೆಬ್ಬಾರ್ ಹಾಗೂ ವರದ ಹೆಬ್ಬಾರ್ ದಂಪತಿಗಳ ಪುತ್ರ.

**'ಮುನಿಯಾಲು ಲಯನ್ಸ್ ಮಾದರಿ ಸಂಸ್ಥೆ'**

ಜಿಲ್ಲೆಯ 72 ಲಯನ್ಸ್ ಕ್ಲಬ್ ಗಳ ಪೈಕಿ ಮುನಿಯಾಲು ಲಯನ್ಸ್ ಮಾದರಿ ಕ್ಲಬ್ ಎಂಬ ಹೆಗ್ಗಳಿಕೆ ಪಡೆದಿದ್ದು ಗ್ರಾಮೀಣ ಸೇವಾ ಚಟುವಟಿಕೆಗಳಲ್ಲಿ ನಂ.1 ಆಗಿ ಮೂಡಿಬಂದಿದೆ. ಕಳೆದ ಒಂದು ವರ್ಷದಲ್ಲೇ ಸಿಟಿ ಕ್ಲಬ್‌ಗಳನ್ನು ನಾಚುವಂತೆ ರೂ.20 ಲಕ್ಷಕ್ಕೂ ಅಧಿಕ ವೆಚ್ಚದ ಸೇವಾ ಕಾರ್ಯವನ್ನು ಹಳ್ಳಿಗಳಿಗೆ ತಲುಪಿಸಿದ ಕ್ಲಬ್ ಇದಾಗಿದೆ ಎಂದು ಜಿಲ್ಲೆಯ ಲಯನ್ಸ್ ತುಳು ಮತ್ತು ಜಾನಪದ ಸಂಸ್ಕೃತಿ ವಿಭಾಗದ ಜಿಲ್ಲಾಧ್ಯಕ್ಷ ಈಶ್ವರ ಜಿ. ಶೆಟ್ಟಿ ಹೇಳಿದರು. (9ನೇ ಪುಟಕ್ಕೆ...)

## ದಿ|ಕೆಡೆಂಬಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**2014-15ರ** ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ದಿನಾಂಕ 11-10-2015. ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 20-09-2015ರ ಒಳಗೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

## ಯಕ್ಷದೇವ ಮಿತ್ರರ ಯಕ್ಷಾಯನ-2015 : ಹೊಸತನದ ಶೋಧದಲ್ಲಿ ಕಲಾವರಣ

ಯಕ್ಷದೇವ ಮಿತ್ರ ಕಲಾ ಮಂಡಲಿ (ರಿ.) ಬೆಳುವಾಯಿ-ಇವರ ಹದಿನೆಂಟನೆಯ ವರ್ಷದ ಕಲಾ ಪ್ರದರ್ಶನ - ಕಲಾಭಿಯಾನ ಯಶಸ್ವಿಯಾಗಿ ಸಂಪನ್ನಗೊಂಡಿತು. ಪ್ರತಿ ವರ್ಷವೂ ನವೀನ ಚಿಂತನೆಗಳಿಂದ ಭಿನ್ನ ಆಯಾಮಗಳನ್ನು ಶೋಧಿಸುವ ಈ ಸಂಸ್ಥೆಯ ಕಾರ್ಯಾಧ್ಯಕ್ಷ ಎಂ.ದೇವಾನಂದ ಭಟ್ಟರು ಈ ಬಾರಿ ಐದು ದಿನಗಳಲ್ಲಿ ಎಂಟು ವಿಶಿಷ್ಟ ಕಾರ್ಯಕ್ರಮಗಳನ್ನು ನೀಡಿದರು. 125 ಕಲಾವಿದರು ಭಾಗವಹಿಸಿದ ಕಲೋತ್ಸವವಿದು. ಐದೂ ದಿನವೂ ಸಭೆ, ಸಂವಾದ, ಸಂಸ್ಮರಣೆಗಳು, ಉದ್ಘಾಟನೆ, ಸಮಾರೋಪಗಳು - ಇವುಗಳಲ್ಲಿ ಭಾಗವಹಿಸಿದ ಗಣ್ಯರೂ ಐವತ್ತಕ್ಕಿಂತ ಹೆಚ್ಚು. ಅದರ ಸಂಕ್ಷಿಪ್ತ ಅವಲೋಕನ ನಿಮ್ಮ ಮುಂದೆ.

ದಿನಾಂಕ 1-07-2015ರಂದು ಮಕ್ಕಳ ಬಯಲಾಟ ಜಾಂಬವತೀ ಕಲ್ಯಾಣದೊಂದಿಗೆ ಕಲಾವರಣವಾಯಿತು (ನಡೆಸಿಕೊಟ್ಟವರು - ಕದಳೀ ಕಲಾ ಕೇಂದ್ರ ಕದ್ರಿ-ನಿ. ರವಿ ಅಲೆವೂರಾಯ) ಮಹಿಳಾ ಭಾಗವತಿಕೆ (ಅಮೃತಾ ಅಡಿಗ) - ಜಾಂಬವ - ಕೃಷ್ಣ ಪಾತ್ರಗಳನ್ನು ಕೇಂದ್ರೀಕರಿಸಿದ ಕಾರ್ಯಕ್ರಮ ನೃತ್ಯ ವಿಭಾಗದಲ್ಲಿ ಗೆದ್ದು, ಸಂಭಾಷಣಾ ಭಾಗದಲ್ಲಿ ಸೋತು, ಸಂಯೋಜನೆಯಲ್ಲಿ ಯಶಸ್ವಿಯಾಯಿತು. ಜಾಂಬವನ ಪ್ರವೇಶಕ್ಕೆ ಸೊಪ್ಪಿನ ಚಂಡುಕೊಟ್ಟಿದ್ದರೆ, ಕೃಷ್ಣನಿಗೆ ಸುದರ್ಶನ ಕೊಡದಿದ್ದರೆ ಒಳ್ಳೆಯದಿತ್ತು.

ಅಂದಿನ ಹಿಮ್ಮೇಳ ವೈಭವದ ಪ್ರದರ್ಶನ "ಗಾಯನ - ವಾದನ - ವೈಭವ" ಇತ್ತೀಚೆಗೆ ಯಕ್ಷಗಾನ ವೈಭವ ಜನಪ್ರಿಯವಾಗುತ್ತಿದ್ದು ಅದರ ವಿಸ್ತರಿತ ರೂಪವಿದು. ಕಿಕ್ಕಿರಿದು ತುಂಬಿದ ಸಭೆಯ ಹರ್ಷೋದ್ಗಾರಗಳ ನಡುವೆ - ಬಲಿಪ ನಾರಾಯಣ ಭಾಗವತರು, ಪದ್ಯಾಣ ಗಣಪತಿ ಭಟ್ಟರು, ಪುತ್ತಿಗೆ ರಘುರಾಮ ಹೊಳ್ಳರು, ದಿನೇಶ ಅಮ್ಮಣ್ಣಾಯರು ಇವರಿಗೆ - ವಾದ್ಯ ಸಹಕಾರಿಗಳಾಗಿ ಅಡೂರು ಗಣೇಶ್ ರಾವ್, ಚೈತನ್ಯ ಪದ್ಯಾಣ (ಮದ್ದಲೆ) ಮುರಾರಿ ಕಡಂಬಳಿತ್ತಾಯ (ಚೆಂಡೆ) ವಸಂತ (ಚಕ್ರತಾಳ) - ಯಕ್ಷೇತರ ವಾದಕರಾಗಿ ಡಿ.ಕೆ.ಸುರೇಶ್ (ತವಿಲ್) ಎ.ಕೆ.ಉಮನಾಥ (ನಾದಸ್ವರ), ಶ್ರೀಧರ ಆಚಾರ್ (ವಾಯಲಿನ್) ದೀಪಕ್ ಹೆಬ್ಬಾರ್ (ಕೊಳಲು), ಶರತ್ ಹಳೆಯಂಗಡಿ (ಗಿಟಾರ್) ಪಾಲ್ಗೊಂಡು - ಯಕ್ಷಗಾನಕ್ಕೆ ತಮ್ಮ ವಾದ್ಯಗಳನ್ನು ಸಮರ್ಥವಾಗಿ ಸಂಯೋಜಿಸಿದರು. ಮೂರುವರೆ ಗಂಟೆಯಲ್ಲಿ ಪ್ರಸ್ತುತಿಯಾದುದು 24 ಪದ್ಯಗಳು ಮಾತ್ರ. ಇಡೀ ಕಾರ್ಯಕ್ರಮ ಕಛೇರಿಯ ಮಾದರಿಯಲ್ಲಿ ಮೂಡಿ ಬಂದು- ಯಕ್ಷಗಾನ - ಗಾನ ಪದ್ಧತಿಗೆ ಹೊಸತೊಂದು ಆಯಾಮ ಸೃಷ್ಟಿಸಿತು. ಶ್ರೀ ಹರೀಶ್ ಬೊಳಂತಿಮೊಗರು ಕಾಯಕ್ರಮವನ್ನು ಸೊಗಸಾಗಿ ನಡೆಸಿಕೊಟ್ಟರು. ವಾಯಲಿನ್, ಕೊಳಲು, ನಾದಸ್ವರಗಳನ್ನು ತವಿಲ್‌ನಂತಹ ವಾದನಗಳನ್ನು ಬಳಸಿ ಕಛೇರಿಯಾಗಿಸ ಬಹುದೆಂಬುದು ಶ್ರುತವಾಯಿತು. ಆದರೆ ಯಕ್ಷಗಾನದ ಪ್ರಭಾವ ಭಾಗವಾದ ಬಯಲಾಟಕ್ಕೋ, ತಾಳಮದ್ದಲೆಗೋ ಇವು ಹೊಂದಲಾರದು.

**2-07-2015 : ಕಲಾ ರಸ ವಿರಸ**

ಇದೊಂದು ನೂತನ ಪ್ರಯೋಗ. ದೂರದರ್ಶನಗಳಲ್ಲಿ ಪ್ರಯೋಗವಾಗುವ 'ಹರಟೆ'ಯಂತಹ ಕಾರ್ಯಕ್ರಮ. ವಾಸುದೇವರಂಗ ಭಟ್, ಉಜಿರೆ ಅಶೋಕ ಭಟ್, ಶಂಭು ಶರ್ಮ, ಅರವಿಂದ ಬೋಳಾರು, ರಾಧಕೃಷ್ಣ ಕಲ್ಚಾರ್, ಶ್ರೀರಮಣ ಆಚಾರ್, ಬಂಟ್ವಾಳ ಜಯರಾಮ ಆಚಾರ್ಯ, ರಾಮ ಜೋಯಿಸ್ ಬೆಳ್ಳರೆ - ಇವರು ಎರಡು ತಂಡಗಳಾಗಿ ಪರ ವಿರೋಧ ಚರ್ಚೆ ನಡೆಸಬೇಕಿತ್ತು. ಆದರೆ ಹಾಗಾಗದೆ ಒಂದಿಷ್ಟು ಗೋಜಲಾಯಿತು. ಒಳ್ಳೆಯ ಚಿಂತನೆ, ಚರ್ಚೆಯಲ್ಲಿ ಚಪ್ಪಾಳೆ, ಪಾತ್ರತಲ್ಲೀನತೆ, ಸಂಸ್ಕೃತ ಶ್ಲೋಕಗಳ ಬಳಕೆ, ಹಾಸ್ಯದ ಹೊನಲು ಮುಂತಾದವು ದೀರ್ಘವಾಗಿಯೇ ಪ್ರಸ್ತುತಗೊಂಡವು. ಖಚಿತ ನಿಲುವೇನು? ಈ ಕುರಿತು ಮುಂದೆ ಸಂಯೋಜಿಸುವವರು ಪೂರ್ವತಯಾರಿ ಮಾಡಿ ಕೊಂಡರೆ.... ಸಮರ್ಥರನ್ನು ದುಡಿಸಿಕೊಂಡರೆ.... ಯಕ್ಷಗಾನಕ್ಕೆ ಮತ್ತೊಂದು ಆಯಾಮ ನೀಡುವ ಸೊಗಸಿನ ಕಾರ್ಯಕ್ರಮವಾದೀತು. ಕೃಷ್ಣಾರ್ಜುನ ಕಾಳಗದ ಹಾಸ್ಯದೃಶ್ಯ, ತುಳು ಹಾಸ್ಯ ಸನ್ನಿವೇಶಗಳು ಪ್ರಸ್ತುತಗೊಂಡವು.

ದಿನಾಂಕ 2, 4, 5 ರಂದು ಕಿರು ಅವಧಿಯ 'ಹರಿದರ್ಶನ' 'ಭಾರತ' 'ರಾಮಾಯಣ' ಈ ಮೂರು ಸಭಾಕಾರ್ಯಕ್ರಮದ ಪೂರ್ವದಲ್ಲಿ ಪ್ರಸ್ತುತಗೊಂಡವು. ಈ ಕಾರ್ಯಕ್ರಮಗಳಲ್ಲಿ ಜಯರಾಮ ಅಡೂರು, ಬಲಿಪ ಶಿವಶಂಕರ ಭಟ್, ವಾಸುದೇವ ಭಟ್ ಎರ್ಮಾಳು ಭಾಗವತರಾಗಿ ಸೋಮಶೇಖರ ಭಟ್ ವಾದನ ಸಹಕಾರಿಗಳಾಗಿದ್ದರು. ವಿಷ್ಣುಶರ್ಮ, ರಜನೀಶ ಹೊಳ್ಳ, ಬಾಲಕೃಷ್ಣ ಭಟ್, ವೆಂಕಟರಮಣ ಕೆರೆಗದ್ದೆ - ಅರ್ಥವಾದಿಗಳಾಗಿದ್ದರು.

ದಿನಾಂಕ 2 ಜುಲೈಯಂದು ಸಂಜೆಯಿಂದ ಸುಮಾರು ಆರು ಗಂಟೆಗಳ ಕಾಲ "ಕುರುಕ್ಷೇತ್ರ" ಬಯಲಾಟ- ಭೀಷ್ಮ ಸೇನಾಪತ್ಯ, ಚಕ್ರವ್ಯೂಹ ಕರ್ಣ, ಗದಾಯುದ್ಧ - ಸಮಯವನ್ನು ಸರಿಯಾಗಿ ಹಂಚಬೇಕಿತ್ತು. ಕೆ.ಗೋವಿಂದ ಭಟ್, ವಿಶ್ವೇಶ್ವರ ಭಟ್, ಜಯಪ್ರಕಾಶ ಪೆರ್ಮುದೆ, ಮಧೂರು ರಾಮಕೃಷ್ಣ ನಾವುಡ ಮುಂತಾದ ನುರಿತ ಕಲಾವಿದರಿಂದ ಭರ್ಜರಿ ಪ್ರಯೋಗವಾಗಿ ಪ್ರಸ್ತುತಗೊಂಡ ಕಾರ್ಯಕ್ರಮದಲ್ಲಿ ಸಿರಿಬಾಗಿಲು ರಾಮಕೃಷ್ಣ ಮಯ್ಯ, ರವಿಚಂದ್ರ ಕನ್ನಡಿಕಟ್ಟೆ ಭಾಗವತರು.

ದಿನಾಂಕ 02-07-2015 ತುಳು ತಾಳಮದ್ದಲೆ "ತುಳುನಾಡ ಬಲಿಯೇಂದ್ರ" ಸೊಗಸಾಗಿ ಮೂಡಿದ ಕಾರ್ಯಕ್ರಮ. ಭಾಷೆಯನ್ನು ದುಡಿಸಿಕೊಂಡರೆ ತುಳು-ತಾಳ ಮದ್ದಲೆಗೆ ಚೆನ್ನಾಗಿ ಹೊಂದೀತು ಎಂಬುದನ್ನು ಸ್ಪಷ್ಟವಾಗಿ ತೋರಿದ ಕಲಾವಿದರು ಭಾಸ್ಕರ ರೈ ಕುಕ್ಕುವಳ್ಳಿ (ಬಲಿ), ಕದ್ರಿ ನವನೀತ ಶೆಟ್ಟಿ (ಶುಕ್ರ) ವಾದಿರಾಜ ಕಲ್ಲೂರಾಯ (ವಾಮನ) ಸರಪಾಡಿ ಅಶೋಕ ಶೆಟ್ಟಿ (ಕಲಿ) ರವಿ ಅಲೆವೂರಾಯ (ವಿಂಧ್ಯಾವಳಿ) ಪುರಾಣ ಜಾನಪದಗಳ ಸಂಯೋಜನೆಯಾದ ಈ ಕಥೆ-ಯಕ್ಷಗಾನಕ್ಕೆ ಅಪೂರ್ವ ಕೊಡುಗೆ. ಈ ಪ್ರಸಂಗದ ಕವಿ - ಹರೀಶ ಶೆಟ್ಟಿ ಸೂಡ ಮತ್ತು ಸತೀಶ್ ಶೆಟ್ಟಿ

(10ನೇ ಪುಟಕ್ಕೆ...)


## ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

ನಿಧನ

### ಹೆಚ್.ಶಂಕರನಾರಾಯಣ ರಾವ್.

ಶ್ರೀ ಹೆಚ್ ಶಂಕರನಾರಾಯಣ ರಾವ್ (80ವರ್ಷ) ನಿವೃತ್ತ ಅದ್ಯಾಪಕರು ಹೇರೂರು. ಇವರು ತಾ.10-07-2015ರಂದು ಸ್ವಗೃಹದಲ್ಲಿ ನಿಧನರಾದರು. ಇವರು ಮಗಳು, ಅಳಿಯ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಹೆಚ್. ಸದಾನಂದ ಶ್ಯಾನುಭಾಗ್

92 ಹೇರೂರು ಬಂಟಕಲ್ಲಿನ ಶ್ರೀ ಹೆಚ್. ಸದಾನಂದ ಶ್ಯಾನುಭಾಗ್ ಇವರು 19-07-2015ರಂದು ನಿಧನರಾದರು. ಇವರು ಪತ್ನಿ, ಮಕ್ಕಳು, ಸೊಸೆಯಂದಿರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

### ಬಿ. ರಾಘವೇಂದ್ರ ರಾವ್ ಬಾರ್ಕೂರು

ಬಾರ್ಕೂರು ಮಸ್ಕಿಬೈಲಿನ ಶ್ರೀ ರಾಘವೇಂದ್ರ ರಾಯರು ಸ್ವಲ್ಪ ಕಾಲದಿಂದ ಅಸೌಖ್ಯದಿಂದಿದ್ದು ದಿನಾಂಕ 12-06-2015ರಂದು ನಿಧನರಾದರು. ಮೃತರಿಗೆ ಸುಮಾರು 65 ವರ್ಷ ಪ್ರಾಯವಾಗಿದ್ದು ಇವರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು. ಅಪಾರ ಬಂಧೂ ಬಳಗದವರನ್ನು ಆಗಲಿದ್ದಾರೆ.

## ಗೃಹ ಪ್ರವೇಶ

ಮಂಗಳೂರು ಆಕಾಶವಾಣಿ ಮೃದಂಗ ಕಲಾವಿದ ಶ್ರೀ ರವಿಕುಮಾರ್ ಮತ್ತು ಪತ್ನಿ ಶ್ರೀಮತಿ ಜ್ಯೋತಿಯವರು ಮಂಗಳೂರು ಕುಂಟಿಕಾನದ ಭಾರ್ಗವಿಗ್ಲೋರಿ ರೆಸಿಡೆನ್ಸಿಯ ಮೂರನೇ ಮಹಡಿಯಲ್ಲಿರುವ **“ಸರಸ್ವತಿ ಚಂದ್ರ”** ಎಂಬ ಗೃಹದ ಪ್ರವೇಶೋತ್ಸವನ್ನು ದಿನಾಂಕ 08-06-2015ರಂದು ನೆರವೇರಿಸಿದರು.

★★★ ★★★

ಶ್ರೀಮತಿ ಮತ್ತು ಶ್ರೀ ಪ್ರಭಾಕರ ಶ್ಯಾನುಭೋಗರ ಪುತ್ರ ಪವಿತ್ರ ಶ್ಯಾನುಭೋಗ್ ತಂತ್ರಾಡಿ ಇವರು ನೂತನವಾಗಿ ಕಟ್ಟಿಸಿದ ಮನೆ **“ಪ್ರಗತಿ”**ಯ ಪ್ರವೇಶೋತ್ಸವನ್ನು ದಿನಾಂಕ 10-05-2015ರಂದು ಮುಲ್ಕಿ ಸಮೀಪದ ಚಿತ್ರಾಪು ಎಂಬಲ್ಲಿ ನೆರವೇರಿಸಿದರು.

★★★ ★★★

ಅಲೆವೂರಿನಲ್ಲಿರುವ ಶ್ರೀ ದೇವರಾಯ ಶಾಸ್ತ್ರಿ ಮತ್ತು ಶ್ರೀಮತಿ ಮೋಹಿನಿಯವರ ಪುತ್ರ ಕೆ. ನವೀನ್ ಕುಮಾರ್ ಮತ್ತು ಶ್ರೀಮತಿ ಅಮಿತಾ (ಮಂಗಳೂರಿನ ಶ್ರೀಮತಿ ಶಾಲಿನಿ ಶ್ರೀನಿವಾಸರಾಯರ ಪುತ್ರಿ) ದಂಪತಿಗಳು ಉಡುಪಿ ಗುಂಡಿಬೈಲಿನಲ್ಲಿರುವ ‘ಸಾಯಿ ವಿಷ್ಣು ವಿಹಾರ್’ನ ಐದನೇ ಮಹಡಿಯಲ್ಲಿರುವ ಶ್ರೀ ಅನುಗ್ರಹ ಎಂಬ ನೂತನ ಗೃಹದ ಗೃಹಪ್ರವೇಶವನ್ನು ತಾ.20-06-2015ರಂದು ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನೆರವೇರಿಸಿದರು.

## ಷಷ್ಠ್ಯಬ್ದಿ ಶಾಂತಿ ಸಮಾರಂಭ

ಉಜಿರೆ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಉಪಪ್ರಾಂಶುಪಾಲರಾಗಿರುವ ಚೊಕ್ಕಾಡಿ ಶಿವರಾವ್‌ರವರು ತಮ್ಮ ಅರುವತ್ತನೇ ವರ್ಷದ ‘ಷಷ್ಠ್ಯಬ್ದಿ ಶಾಂತಿ’ ಸಮಾರಂಭವನ್ನು ತಮ್ಮ ಸ್ವಗೃಹ ಉಜಿರೆಯ ‘ಅರಾಧನಾ’ದಲ್ಲಿ ಆಚರಿಸಿಕೊಂಡರು. ಜುಲೈ 19 ಭಾನುವಾರದಂದು ನಡೆದ ಈ ಸಮಾರಂಭದಲ್ಲಿ ಧಾರ್ಮಿಕ ಕಾರ್ಯಕ್ರಮಗಳಾದ ಮೃತ್ಯುಂಜಯ, ಮಾರ್ಕಾಂಡೇಯ ಹಾಗೂ ನವಗ್ರಹ ಹೋಮಗಳು ಪುರೋಹಿತರಾದ ಅಡೂರು ಸುಬ್ರಾಯ ಭಟ್ಟರ ನೇತೃತ್ವದಲ್ಲಿ ಜರಗಿದವು. ತದನಂತರ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ವಿದ್ವಾನ್ ಡಾ|ಶ್ರೀಧರ್ ಭಟ್ ಇವರು ಷಷ್ಠ್ಯಬ್ದಿ ಶಾಂತಿ ಆಚರಣೆಯ ಔಚಿತ್ಯ ಹಾಗೂ ಮಹತ್ವದ ಬಗ್ಗೆ ಧಾರ್ಮಿಕ ಉಪನ್ಯಾಸವನ್ನು ಅತ್ಯಂತ ಮನೋಜ್ಞವಾಗಿ ನೀಡಿದರು. ಮುಂದಿನ ಸಾಂಸ್ಕೃತಿಕ ಕಾರ್ಯಕ್ರಮವಾಗಿ, ಉದಯ ಟಿ.ವಿ ಮತ್ತು ಟಿ.ವಿಯ ರಿಯಾಲಿಟಿ ಶೋ ಗಳಲ್ಲಿ ಭಾಗವಹಿಸಿದ ಉಜಿರೆ ಅನನ್ಯ ಭಟ್ ಹಾಗೂ ಸುಬ್ರಮಣ್ಯ ಭಟ್ ಇವರಿಂದ ನಡೆದ ಸುಮಧುರ ಗೀತೆಗಳ ಗಾಯನ ಕಾರ್ಯಕ್ರಮ ಎಲ್ಲರ ಪ್ರಶಂಸೆಗೆ ಪಾತ್ರವಾಯಿತು. ಕಾರ್ಯಕ್ರಮದ ಕೊನೆಯ ಅಂಗವಾಗಿ ಎಂ.ಆರ್.ವಾಸುದೇವ ಮಂಗಳೂರು ಇವರು ಇತ್ತೀಚೆಗಷ್ಟೇ ಬಿಡುಗಡೆಯಾದ ತಮ್ಮ ಕವನ ಸಂಕಲನ ‘ಅಖಾಡ’ದಿಂದ ಸ್ವರಚಿತ ಕವನ ಹಾಡಿಸಿ ಅಭಿನಂದಿಸಿದರು.

ಧಾರಾಕಾರವಾಗಿ ಸುರಿಯುತ್ತಿರುವ ಅಷಾಢದ ಮಳೆಯ ಮಧ್ಯೆಯೂ ವ್ಯವಸ್ಥಿತವಾಗಿ ನಡೆದ ಈ ಸಮಾರಂಭಕ್ಕೆ ಆಪ್ತರಾದ ಬಂಧು ಬಾಂಧವರು, ಆಹ್ವಾನಿತರು ಪ್ರೀತಿಯಿಟ್ಟು ಆಗಮಿಸಿ ದಂಪತಿಗಳಿಗೆ ಶುಭ ಹಾರೈಸಿದರು. ಈ ಎಲ್ಲಾ ಕಾರ್ಯಕ್ರಮಗಳನ್ನು ಶಿವರಾವ್ ದಂಪತಿಗಳು ತಮ್ಮ ಪುತ್ರಿ ಡಾ| ಚೇತನಾ, ಅಳಿಯ ಡಾ| ಶಾಶ್ವತ್ ಸತ್ಯನಾಥ್ (ಡಾ| ಸತ್ಯನಾಥ್ ಹಾಗೂ ಡಾ| ಗೀತಾ ಕಾಸರಗೋಡು ಇವರ ಸುಪುತ್ರ) ಹಾಗೂ ಪುತ್ರ ಅಶ್ವಿನ್‌ನೊಂದಿಗೆ ಸಂಭ್ರಮದಿಂದ ಆಸ್ವಾದಿಸಿದರು.

## ದಿ| ಟಿ.ರಾಧಾಕೃಷ್ಣ ಭಟ್‌ರವರ ಸಂತಾಪ ಸೂಚಕ ಸಭಾ ಕಾರ್ಯಕ್ರಮ



ತಾ.11-07-2015 ರಂದು ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ ಕ್ಷೇತ್ರದ ಸಭಾ ಭವನದಲ್ಲಿ, ತಾ. 30-06-2015 ರಂದು ನಿಧನರಾದ ನಮ್ಮ ಸಮಾಜದ ಕೋಡಿಬೈಲು ಕಡಬ ಟಿ.ರಾಧಾಕೃಷ್ಣ ಭಟ್‌ರವರ ವೈಕುಂಠ ಸಮಾರಾಧನೆ ಪ್ರಯುಕ್ತ ವಿಶ್ವಹಿಂದೂ ಪರಿಷತ್ ಪುತ್ತೂರು ವಿಭಾಗ ಆಯೋಜಿಸಿದ ಸಂತಾಪ ಸೂಚಕ ಸಭಾ ಕಾರ್ಯಕ್ರಮ ನಡೆಯಿತು. ಸಭಾ ಅಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿ, ಪ್ರಾಂತ ಕಾರ್ಯದರ್ಶಿ, ವಿಶ್ವಹಿಂದೂ ಪರಿಷತ್, ದ.ಕ.ಜಿಲ್ಲಾರವರು ವಿ.ಹಿ.ಪ.ಪ್ರಧಾನ ಕಾರ್ಯದರ್ಶಿಯಾದ ದಿ| ರಾಧಾಕೃಷ್ಣ ಭಟ್‌ರ ಗುಣಗಾನ ಮಾಡಿ, ಗೋ-ಸಂರಕ್ಷಣೆ ಇತ್ಯಾದಿ ಸಂಸ್ಕೃತಿಯ ಉಳಿವಿಗಾಗಿ ಅವರ ಶ್ರಮವನ್ನು ಪ್ರಶಂಶಿಸಿ ಅವರ ಕನಸಾದ ಗೋರಕ್ಷಣಾ ಕೇಂದ್ರ, ವೃದ್ಧಾಶ್ರಮ, ವಿದ್ಯಾಸಂಸ್ಥೆ ಇತ್ಯಾದಿ ಸ್ಥಾಪನೆಯ ಸಂಕಲ್ಪವನ್ನು ನನಸಾಗುವಂತೆ ಮಾಡುವರೆ ಜನತೆಗೆ ಕರೆಕೊಟ್ಟರು. ಸ್ಥಾನಿಕ ಸಮಾಜದ ಪರವಾಗಿ, ದಿವಂಗತರ ಸಹೋದರಿ ಸೌ|ಸುಮಂಗಲ, ಶ್ರೀ ಎನ್.ಎಸ್. ದಿನೇಶರಾವ್, ಶ್ಯಾರ ಕೊಡಿಪ್ಪಾಡಿ, ಶ್ರೀ ಕೊಲ್ಪೆ ಗೋಪಾಲಕೃಷ್ಣರಾಯರು ಮಾತನಾಡಿ ಗೌರವಾರ್ಪಣೆಗೈದರು.

**ಜಿ.ಕೆ.ಕೋಲ್ಪೆ, ಉಡುಪಿ.**


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


### ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

**ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408**

### 2014-15ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ,

ನಮ್ಮ ಸಂಘದ 2014-2015ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.06-09-2015ನೇ ರವಿವಾರ ಪೂರ್ವಾಹ್ನ ಘಂಟೆ 11-00ಕ್ಕೆ ಸರಿಯಾಗಿ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಲಿರುವುದು. ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿದ್ದು ಸಭೆಯ ನಡವಳಿಕೆಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಆಡಳಿತ ಮಂಡಳಿಯ ನಿರ್ಣಯದಂತೆ**

**ಪಟ್ಟಾಭಿರಾಮ ಎನ್.ಎಸ್**<br>ಕಾರ್ಯದರ್ಶಿ

**ಎಂ ಸದಾನಂದ ರಾವ್**<br>ಅಧ್ಯಕ್ಷರು

**ಕಾರ್ಯಕ್ರಮ ಸೂಚಿ**

1. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು.
2. ತಾ: 21-09-2014ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ.
3. 2014-2015ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
4. 2014-2015ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಮಂಡನೆ ಮತ್ತು ಅಂಗೀಕಾರ.
5. 2014-2015ನೇ ಸಾಲಿನ ಅಂದಾಜು ಆಯ-ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
6. 2015-2016ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯ ಅಂಗೀಕಾರ.
7. 2014-2015ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
8. 2015-2016ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕ
9. ಸಂಘದ ಮೂಲ ಉಪನಿಬಂಧನೆಗಳಿಗೆ ಸೂಚಿಸಲಾದ ತಿದ್ದುಪಡಿ ಬಗ್ಗೆ.
10. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು.

**ವಿ.ಸೂ.** : 1. ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ ಮಹಾಸಭೆಯ ದಿನಾಂಕದ 7 ದಿನಗಳ ಮೊದಲು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.

2. ಲಾಭಾಂಶ ಹಾಗೂ ಪಾಲು ಪತ್ರ ಪಡೆಯದ ಸದಸ್ಯರು ಕಛೇರಿ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ. ಇಲ್ಲದಿದ್ದಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಪಡೆಯದಿರುವ ಲಾಭಾಂಶ ಹಣವನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.

ಸದಸ್ಯರಿಗೆ ಮಧ್ಯಾಹ್ನ ಭೋಜನದ ವ್ಯವಸ್ಥೆ ಇರುತ್ತದೆ.


ಪ್ರೊ : ಸುಧಾಕರ್ ರಾವ್ ಬೆಳ್ಳೆ



**ಶ್ರೀಮಾತಾ ಇಲೆಕ್ಟ್ರಾನಿಕ್ಸ್**

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103

ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093





**ಎಮ್. ದೇವಾನಂದ್ ಭಟ್**

Cell : 9845644556<br>9483913344



**ಶೋಭಾ ಡಿಜಿಟಲ್**

ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)

ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



*Krishna Rao*

Ph : 2520652<br>Mob. : 9902029048

**KISHAN**





**Studio & Video**

**Indoor Photography & Port Folio Photography, Video & Mixing, Lamination**

MAIN ROAD, MAJOOR & BANTAKAL.



**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**<br>**Tel : 0824 2412903, 9448191028**<br>**Navadurga Share Services**<br>**Email : navdurga@bp.sharekhan.com**

Sharekhan<br>YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

# ಜಪಾನ್‌ನ ಅವಿಸ್ಮರಣೀಯ ದಿನಗಳು; ಒಂದು ಅವಲೋಕನ

– ಡಾ। ವೈ. ರವೀಂದ್ರನಾಥ ರಾವ್, ಪ್ರಾಂಶುಪಾಲರು, ಬ್ರಹ್ಮಾವರ.

(ಕಳೆದ ಸಂಚಿಕೆಯಿಂದ.....)

ಯಾಕೊಹಾಮ ಮತ್ತು ಇಲ್ಲಿನ ಹೆಚ್ಚಿನ ನಗರಗಳಲ್ಲಿ ರೈಲುಗಳು ಕೆಳ ಅಂತಸ್ತುಗಳಲ್ಲಿ ಓಡಾಡುತ್ತಿರುವುದರಿಂದ ನಗರದ ಮೇಲ್ಭಾಗದಲ್ಲಿ ಜನದಟ್ಟಣೆ ಕಡಿಮೆ ಇರುತ್ತದೆ. ಜೊತೆಗೆ ಜಪಾನಿನ ಜನಸಂಖ್ಯೆಯೂ ಕುಸಿಯುತ್ತಿದ್ದು ಇಲ್ಲಿನ ಒಟ್ಟು ಜನನ/ಫಲವತ್ತತೆಯ ಪ್ರಮಾಣ (Total fertility Rate) ಕೇವಲ 1.4 ಆಗಿರುವುದರಿಂದಲೂ (ಎಲ್ಲಾ ದೇಶಗಳಲ್ಲಿ ಸಮತೋಲನ ಕಾಪಾಡುವ ಜನಸಂಖ್ಯೆಯ ಸಾಮಾನ್ಯ ಪ್ರಮಾಣವು 2.1 ಇರಬೇಕಾಗುತ್ತದೆ) ವಿರಳವಾದ ಜನಸಂಖ್ಯೆ ಮತ್ತು ಹೆಚ್ಚಿನ ಸಂಖ್ಯೆಯ ವಯೋವೃದ್ಧರನ್ನು ಇಲ್ಲಿ ಕಾಣಬಹುದು.

ನಮ್ಮ ಸಮ್ಮೇಳನದಲ್ಲಿ, ಪ್ರಬಂಧ ಮಂಡನೆಗಾಗಿ ಎಲ್ಲಾ ಕೊಠಡಿಗಳಲ್ಲಿ ಅತ್ಯುತ್ತಮ ಗುಣಮಟ್ಟದ ಎಲ್‌ಸಿಡಿ ವ್ಯವಸ್ಥೆ ಮಾಡಿದ್ದರು. ಪ್ರಬಂಧ ಮಂಡನೆಯ ನಿಯಮಾವಳಿಗಳನ್ನು (presentation guidelines) ಅಕ್ಷರಗಾತ್ರ, ಪವರ್‌ಪ್ಯಾಂಟ್ ವರ್ಷನ್‌ಗಳು, ಸ್ಪಷ್ಟತೆ, ಸರಳರೀತಿ (single), ಸ್ಪಷ್ಟರೀತಿ (clear), ದೃಢ–ಸಮಂಜಸರೀತಿ (consistent) ಇತ್ಯಾದಿ ವಿಧಾನಗಳೊಂದಿಗೆ ತಮ್ಮ ಪ್ರಬಂಧಗಳನ್ನು ಹೇಗೆ ಮಂಡಿಸಬಹುದೆಂದು ನಮಗೆ ಮೊದಲೇ ಸ್ಪಷ್ಟವಾಗಿ ನಿರ್ದೇಶಿಸಿದ್ದರು. ಸರಳ ರೀತಿ ಎಂದರೆ ಸ್ಲೈಡ್‌ನಲ್ಲಿನ ಒಂದು ವಾಕ್ಯ ಏಳುಪದಗಳಿಗೆ ಮೀರದಂತೆ, ಒಟ್ಟು ಆರು ಸಾಲುಗಳಿಗೆ ಮಾತ್ರ ಮಿತಗೊಳಿಸುವ ಕ್ರಮ. ಸ್ಪಷ್ಟರೀತಿ ಎಂದರೆ ಸ್ಪಷ್ಟ ಹಾಗೂ ದಪ್ಪಕ್ಷರ ದೃಶ್ಯಗಳಿಗಾಗಿ 'ಏರಿಯಲ್' ಮತ್ತು 'ತಹೊಮಾ'ದಂತಹ ಸ್ಯಾನ್ಸ್–ಸೆರಿಫ್ ಫಾಂಟ್‌ಗಳನ್ನು ಆಯ್ಕೆ ಮಾಡುವ ಕ್ರಮ ಮತ್ತು ದೃಢ ರೀತಿ ಎಂದರೆ ದೊಡ್ಡ ರೇಖಾ ಚಿತ್ರಗಳಿಗೆ ಮತ್ತು ಪ್ರಬಂಧ ಮಂಡನೆಯ ಪರಿವರ್ತನೆಗೊಳ್ಳುವ ಭಾಗಗಳು ಹೇಗೆ ಒಂದಕ್ಕೊಂದು ಸಂಬಂಧಗಳನ್ನು ಹೊಂದಿವೆ ಮತ್ತು ಅವುಗಳ ತಾರ್ಕಿಕ ಕ್ರಮಾನುಗತಿಗಳೊಂದಿಗೆ (Logical Sequence) ಮಂಡನೆಯನ್ನು ಸ್ಪಷ್ಟಪಡಿಸುವ ರೀತಿಯಾಗಿದೆ.

"ಭಾರತದ ಬುಡಕಟ್ಟು ಮಹಿಳೆಯರ ಆರೋಗ್ಯದಲ್ಲಿನ ಅಸಮಾನತೆ ಮತ್ತು ಪರಿವರ್ತನೆ" ಕುರಿತು ನನ್ನ ಸಂಶೋಧನಾ ಪ್ರಬಂಧವನ್ನು ನಿಗದಿಯಂತೆ ತಾ.14 ರಂದು ಮಂಡಿಸಿದ್ದೆ. ಇದನ್ನು "ನಾಗರಿಕ ಸಮಾಜ ಮತ್ತು ಸಾಮುದಾಯಿಕ ಕಾರ್ಯ" ಭಾಗ 2ರ ವಿಷಯದಡಿ ನಡೆಯುವ ಗೋಷ್ಠಿಯಲ್ಲಿ ನಾನು ಮಂಡಿಸಬೇಕಾಗಿತ್ತು. ಈ ಗೋಷ್ಠಿಗಾಗಿ ಸಂಜೆ 3.30ರಿಂದ 5.20ರ ವರೆಗಿನ ಸಮಯ ನಿಗದಿಗೊಳಿಸಲಾಗಿತ್ತು. ಇದು ನಾನು ಸದಸ್ಯನಾಗಿರುವ ಅಂತಾರಾಷ್ಟ್ರೀಯ ಮಟ್ಟದ "ಸಾಮಾಜಿಕ ಚಳುವಳಿ, ಸಾಮುದಾಯಿಕ ಕಾರ್ಯ ಮತ್ತು ಸಾಮಾಜಿಕ ಬದಲಾವಣೆ" ಎನ್ನುವ ಸಂಶೋಧನಾ ಸಮಿತಿ ಹಾಗೂ "ಭವಿಷ್ಯತ್ತಿನ ಸಂಶೋಧನೆ" ಎನ್ನುವ ಇನ್ನೊಂದು ಸಮಿತಿಯ ಜಂಟೀ ಆಶ್ರಯದಲ್ಲಿ ನಡೆಸಲಾದ ಗೋಷ್ಠಿಯಾಗಿದೆ. ಈ ಗೋಷ್ಠಿಯಲ್ಲಿ ಫ್ರಾನ್ಸ್, ದ.ಆಫ್ರಿಕಾ, ಭಾರತ, ಪೋರ್ಚುಗಲ್ ದೇಶಗಳ ಒಟ್ಟು ಏಳು ಮಂದಿ ಮಂಡನೆಗಾರರಲ್ಲಿ ನಾನೂ ಸೇರಿ ಒಟ್ಟು ಆರು ಮಂದಿಗೆ ಅತ್ಯುತ್ತಮ ಸ್ಥಾನವಾದ ಮೌಖಿಕ ಮಂಡನೆಯ (Oral Presentation) ಅವಕಾಶ ಸಿಕ್ಕಿದ್ದು, ಪ್ರತಿಯೊಬ್ಬರಿಗೂ 20 ನಿಮಿಷಗಳ ಸಮಯ ನೀಡಿದ್ದರು. ಪೋರ್ಚುಗಲ್‌ನ ಒಬ್ಬರು ಮಾತ್ರ ಹಂಚಲ್ಪಡುವ ಪ್ರಬಂಧ (Distributed Paper) ಮಂಡಿಸಿದ್ದರು. ನನ್ನ ಪ್ರಬಂಧ ಮಂಡನೆಯ ಗೋಷ್ಠಿ ಪ್ರಾರಂಭವಾಗುವ ಮುನ್ನ ನಮ್ಮ ಅಂತಾರಾಷ್ಟ್ರೀಯ ಸಂಶೋಧನಾ ಸಮಿತಿಯ ಸಂಯೋಜಕರಾದ ಸ್ಪೈನ್ ದೇಶದ ಸಮಾಜಶಾಸ್ತ್ರಜ್ಞ ಡಾ। ಬೆಂಜಮಿನ್ ತೆಜರಿನಾ ಮೊಂಟಾನಾರವರು ನನ್ನನ್ನು ಗುರುತಿಸಿ "ಡಾ।ರಾವ್, ನೀವು ನಾಡಿದ್ದಿನ ಗೋಷ್ಠಿಯ ಅಧ್ಯಕ್ಷರಾಗಿರುವುದು ಗೊತ್ತಿದೆಯಲ್ಲಾ?" ಎಂದು ನನ್ನನ್ನು ನೆನಪಿಸಿದರು.

ನಾನು "ಹೌದು ಡಾ। ಮಾಂಟಾನಾರವರೇ, ನನಗೆ ನೆನಪಿದೆ, ನಿಮಗೆ ನನ್ನ ಕೃತಜ್ಞತೆಗಳು" ಎಂದು ಹೇಳಿದೆ.

ಹಾಗೆಯೇ, ತಾ.16ರಂದು ನಾನು ಬೆಳಗ್ಗೆ 8.30ರಿಂದ 10.20ರ ವರೆಗೆ "ಸಮಕಾಲೀನ ಭಾರತದಲ್ಲಿನ ಪ್ರತಿಭಟನೆ, ಚಳುವಳಿ ಮತ್ತು ಹೊಸ ಅಸ್ಮಿತೆಗಳು" ಎಂಬ ವಿಷಯದ ಕುರಿತು ನಡೆಯುವ ಗೋಷ್ಠಿಯ ಅಧ್ಯಕ್ಷತೆ ವಹಿಸಲಿಕ್ಕಿತ್ತು. ಗೋಷ್ಠಿಯನ್ನು ನಾನು ನಿಗದಿತ ಸಮಯಕ್ಕೆ ಸರಿಯಾಗಿ ಪ್ರಾರಂಭಿಸಿದೆ. ಈ ಗೋಷ್ಠಿಯಲ್ಲಿ ಭಾರತ, ಜಪಾನ್ ಮತ್ತು ಜರ್ಮನಿ ದೇಶಗಳ ಒಟ್ಟು ಆರು ಮಂದಿ ಪ್ರಬಂಧ ಮಂಡಿಸಿದ್ದರು. ಎಲ್ಲರಿಗೂ ನಿಗದಿ ಯಾದಂತೆ ಮೌಖಿಕ ಮಂಡನೆ ಮಾಡಲು ಅವಕಾಶ ನೀಡಲಾಗಿತ್ತು. ಅಲ್ಲದೆ, ಇಬ್ಬರು ಪ್ರಾಧ್ಯಾಪಕರು ಗೋಷ್ಠಿಯ ಸಂಘಟಕರಾಗಿ ಕೂಡಾ ನನ್ನೊಂದಿಗೆ ಸಹಕರಿಸಿದರು. ಗೋಷ್ಠಿಯನ್ನು ಯಶಸ್ವಿಯಾಗಿ ನಡೆಸಿಕೊಟ್ಟದರ ಬಗ್ಗೆ ಸಂಯೋಜಕರು ಮತ್ತು ಇತರ ದೇಶದ ಪ್ರತಿನಿಧಿಗಳು ನನ್ನನ್ನು ಭೇಟಿಯಾಗಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿರುವುದು ನನಗೆ ಬಹಳ ಸಂತೋಷವಾಯಿತು ಮತ್ತು ಅವರೆಲ್ಲರ ಬಗ್ಗೆ ನನಗೆ ಇನ್ನಷ್ಟು ಅಭಿಮಾನ ಮೂಡಿತು.

ಸಮ್ಮೇಳನದ ಕಾರ್ಯಕ್ರಮ ಪುಸ್ತಕವನ್ನು ಮೊದಲ ದಿವಸ ನೊಂದಣಾ ಕೌಂಟರ್‌ನಲ್ಲಿ ಬ್ಯಾಜ್‌ನೊಂದಿಗೆ ನೀಡಿದ್ದು ನಮ್ಮ ಪ್ರಬಂಧ ಮಂಡನೆಯ ಸಾರಾಂಶ ಪುಸ್ತಕ (Book of Absteacts)ವನ್ನು ಈ ಹಿಂದೆ ದ.ಆಫ್ರಿಕಾ ಸ್ವೀಡನ್ ದೇಶಗಳಲ್ಲಿ ಮುದ್ರಿತ ಪ್ರತಿಗಳಲ್ಲಿ ನೀಡಿದ್ದರೂ, ಇಲ್ಲಿ ಇದನ್ನು ನಮ್ಮ ಇಮೇಲ್‌ಗೆ 'ಪಿಡಿಎಫ್' ವಿಧಾನದಲ್ಲಿ ಕಳುಹಿಸಿದ್ದರು. ಸಮ್ಮೇಳನದಲ್ಲಿ ಒಂದು ದಿವಸ ಜಪಾನಿನ ಪ್ರಸಿದ್ಧವಾದ 'ಸಾಂಪ್ರದಾಯಿಕ ಚಹಾ ಸತ್ಕಾರ' ಸಮಾರಂಭವನ್ನು ಏರ್ಪಡಿಸಿದ್ದರು. ಸಾಂಪ್ರದಾಯಿಕವಾಗಿ ಮನೆಗಳಲ್ಲಿ ಮಹಿಳೆಯರು 'ಕಿಮಾನೊ' ಎನ್ನುವ ಸಾಂಪ್ರದಾಯಿಕ ಉಡುಗೆಗಳನ್ನು ಧರಿಸಿ ಅತಿಥಿಗಳಿಗೆ ಸಿಹಿತಿಂಡಿ ನೀಡಿ, ಬಳಿಕ ಹಸಿರು ಚಹಾವನ್ನು ನೀಡಿ ಸತ್ಕರಿಸುವ ರೀತಿಯಲ್ಲಿ ಈ ಸಮಾರಂಭವನ್ನು ಸಂಘಟಿಸಿದ್ದರು. ನಾನು ಇದರಲ್ಲಿ ಭಾಗವಹಿಸಿ ಒಂದು ವಿಶೇಷ ಅನುಭವವನ್ನು ಪಡೆದುಕೊಂಡೆನು.

ಸಮ್ಮೇಳನದಲ್ಲಿ ನನಗೆ ಅನೇಕ ವಿಶ್ವಮಟ್ಟದ ಸಮಾಜಶಾಸ್ತ್ರಜ್ಞರ ಸಮಾಜ ವಿಜ್ಞಾನಿಗಳ ಸಂಪರ್ಕವಾದುದು ಒಂದು ಬಹುದೊಡ್ಡ ಬೌದ್ಧಿಕ ಲಾಭ. ಯುರೋಪಿಯನ್ ಸಂಶೋಧನಾ ಕೌನ್ಸಿಲ್ ಅಧಿಕಾರಿ ವರ್ಗದವರ ಜೊತೆ, ಹಾಗೆಯೇ ಫ್ರಾನ್ಸ್‌ನ ಸಮಾಜಶಾಸ್ತ್ರಜ್ಞ ಪ್ರೊ। ಮೈಕಲ್ ವಿವಿಯೊರ್ಕಾ ಅವರೊಂದಿಗೆ ಮಾತುಕತೆ ನಡೆಸುವ ಅವಕಾಶ ಕೂಡಾ ಲಭಿಸಿತ್ತು. ಜಪಾನ್ ದೇಶದ ಮತ್ತು ಕೊರಿಯಾ ಇತ್ಯಾದಿ ಸುತ್ತಮುತ್ತಲಿನ ದೇಶಗಳ ವಿಶ್ವವಿದ್ಯಾನಿಲಯಗಳ ಮಾಹಿತಿ ನೀಡುವ ವಸ್ತು ಪ್ರದರ್ಶನಗಳು ಉಪಯುಕ್ತವಾಗಿತ್ತು. ವಿಶ್ವಮಟ್ಟದಲ್ಲಿ ಖ್ಯಾತರಾಗಿರುವ ಸೇಜ್ ಪ್ರಕಾಶಕರ ಅತಿಥಿ ಸತ್ಕಾರಗಳೊಂದಿಗೆ ನಡೆಸಿದ ಮಾಹಿತಿ ಕಾರ್ಯಕ್ರಮ, ವಿಶ್ವ ಸಮಾಜಶಾಸ್ತ್ರ ಸಂಘದ ಅಧ್ಯಕ್ಷ, ಅಮೇರಿಕಾ ಬರ್ಕ್‌ಲಿಯ ಕೆಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಪ್ರಖ್ಯಾತ ಸಮಾಜಶಾಸ್ತ್ರಜ್ಞ ಪ್ರೊ। ಮೈಕಲ್ ಬುರವ್ವಾ ಅವರ ಕಾರಿಡಾರ್ ಚರ್ಚಾ ಕಾರ್ಯ ಕ್ರಮವೂ ವಿಶಿಷ್ಟವಾಗಿದ್ದು, ಇವೆಲ್ಲವೂ ಅಂತಾರಾಷ್ಟ್ರೀಯ ಸಮ್ಮೇಳನಗಳಿಂದ ಲಭಿಸುವ ಇನ್ನಿತರ ಬೌದ್ಧಿಕ–ಶೈಕ್ಷಣಿಕ ಲಾಭಗಳಾಗಿವೆ.

ಸಮ್ಮೇಳನದ ಕೊನೆಯ ಒಂದುದಿನ ಮುಂಚಿನ ದಿನ ರಾತ್ರಿ ಬೀಳ್ಕೊಡುವ ಸಮಾರಂಭ ಏರ್ಪಡಿಸಿದ್ದರು. ಇದನ್ನು ಸಮ್ಮೇಳನದ ಕೇಂದ್ರ ಭಾಗದಿಂದ ಸುಮಾರು 15 ನಿಮಿಷಗಳ ನಡಿಗೆಯ ಅಂತರದಲ್ಲಿರುವ 'ಉಸಾನ್‌ಬಶಿ ಯಕೊಹಾಮಾ' ಎನ್ನುವ ಬಂದರು ಪ್ರದೇಶವಾದ ಅಂತಾರಾಷ್ಟ್ರೀಯ ಪ್ರಯಾಣಿಕರ ಹಡಗುಗಳ ಟರ್ಮಿನಲ್‌ನ ದಪ್ಪ ಮರಗಳಿಂದ ನಿರ್ಮಿಸಲಾದ ತೆರೆದಸ್ಥಳದಲ್ಲಿ (Rooftop Plaza) ಬಹಳ ವೈಭವದಿಂದ ನಡೆಸಿದ್ದರು. ಈ ಸಮಾರಂಭದಲ್ಲಿ ಜಪಾನಿನ ವಿವಿಧ ಬಗೆಗಳ ಖಾದ್ಯಗಳು, ತಿನಸುಗಳು, ಪಾನೀಯ ಗಳನ್ನು ನೀಡಿದ್ದರು. ಜೊತೆಗೆ ಎಲ್ಲಾ ಪ್ರತಿನಿಧಿಗಳಿಗೆ ಸ್ಮರಣಿಕೆಗಳನ್ನು ನೀಡಿ ಗೌರವಿಸಿದ್ದರು. ಹಾಗೆಯೇ ಜಪಾನಿನ ವಿವಿಧ ರೀತಿಯ ಕಲಾ ಪ್ರದರ್ಶನಗಳನ್ನು ನಮಗಾಗಿ ಪ್ರದರ್ಶಿಸಿದ್ದರು. ಈ ಸ್ಥಳವು ಯಕೊಹಾಮದ ಒಂದು ಪ್ರಸಿದ್ಧ ಪ್ರೇಕ್ಷಣೀಯ ಸ್ಥಳವೂ ಆಗಿದೆ. ಈ ಸಮಾರಂಭದಲ್ಲಿ ಭಾಗವಹಿಸಲು ನಗರದೊಳಗಿನ ರೈಲು ವ್ಯವಸ್ಥೆಗಳಿದ್ದರೂ ನಾನು ಹೋಟೇಲಿನಿಂದ ಹೊರಡುವ ಸಮಯದಲ್ಲಿ ಭೇಟಿಯಾದ ಆಫ್ರಿಕಾ ಮತ್ತು ಇಂಗ್ಲೆಂಡಿನ ನಮ್ಮ ಪ್ರತಿನಿಧಿಗಳೊಂದಿಗೆ ವಿವಿಧ ವಿಚಾರಗಳನ್ನು ಚರ್ಚಿಸುತ್ತಾ ಅವರಿಗೆ ದಾರಿ ಸೂಚಕವಾಗಿ ಕಾಲ್ನಡಿಗೆಯಲ್ಲೇ ಹೋಗಿದ್ದೆ. ಮಧ್ಯೆ ಒಮ್ಮೆ ಸಣ್ಣ ಮಳೆ ಬಂದು ನಾವೆಲ್ಲ ಒಂದು ಕಡೆ ನಿಲ್ಲಬೇಕಾಗಿ ಬಂದು ಇದು ನಮ್ಮ ಚರ್ಚೆ–ಮಾತುಕತೆಗೆ ಸಹಕಾರಿಯಾಯಿತು.

ಮರುದಿವಸ 19ರಂದು ನಿಗದಿಯಂತೆ ನನ್ನನ್ನು ಟೋಕಿಯೊ ಪ್ರವಾಸಕ್ಕಾಗಿ ಕರೆದುಕೊಂಡು ಹೋಗಲು ನನ್ನ ಜಪಾನಿ ಮಿತ್ರ ಡಾ। ಮೊರಿಯಾಓಂದಾ ಅವರು ಬೆಳಗ್ಗೆ 7 ಗಂಟೆಗೆ ನನ್ನ ಹೋಟೇಲಿಗೆ ಬಂದಿದ್ದರು. ಅವರ ಊರು ಟೋಕಿಯೋದಿಂದ ಅದರ ಉತ್ತರ ಭಾಗದಲ್ಲಿ ಸುಮಾರು 35 ಕಿ.ಮೀ ದೂರದ ಸೈತಾಮಶಿಯಾ ಹತ್ತಿರದ ಹಸುನುಮಾ ಎಂಬ ಪಟ್ಟಣ. ಅಲ್ಲಿಂದ ನನ್ನ ಹೋಟೇಲಿಗೆ 2–3 ರೈಲುಗಳನ್ನು ಬದಲಿಸಿಕೊಂಡು ಪ್ರಯಾಣ ಮಾಡಬೇಕು. ನಂತರ ನನ್ನನ್ನು ಟೋಕಿಯೋಗೆ ಕರೆದುಕೊಂಡು ಹೋಗಿ, ಅರ್ಧದಿವಸದಲ್ಲಿ ಟೋಕಿಯೋದಲ್ಲಿ ಬಸ್ಸಿನಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಬಹುದಾದ ಪ್ಯಾಕೇಜ್ ಟೂರ್‌ನ ಟಿಕೆಟ್ ಖರೀದಿಸಿ ಟೋಕಿಯೊದಲ್ಲಿನ ಪ್ರಸಿದ್ಧ ಟೋಕಿಯೊ ಟವರ್, ಹೊಸಟೋಕಿಯೋ ಟವರ್, ಪಾರ್ಲಿಮೆಂಟ್ ಭವನ, ಹಳೆಯ ರೈಲ್ವೇ ಸ್ಟೇಷನ್, ಪ್ರಾಚೀನ ರಾಜರ ಅರಮನೆಗಳು (Imperial Palace), ಜಪಾನಿ ಹೂದೋಟ ಗಳು, ಚಹಾ ಸಮಾರಂಭಗಳ ಪ್ರಾಚೀನ ಕಟ್ಟಡಗಳು, ಟೋಕಿಯೋ ಸ್ಕೈಟ್ರಿ, ಅಸಕೊಸ ಕನ್ನಾನ್ ದೇವಾಲಯ, ಪ್ರಾಚೀನ ಸೆನ್‌ಸೂಜಿ ಬೌದ್ಧ ದೇವಾಲಯ, ಪಗೋಡಾಗಳನ್ನು ವೀಕ್ಷಿಸಿದೆವು. ಇಲ್ಲಿನ ಸುಂದರವಾದ ಬೌದ್ಧ ದೇವಾಲಯಗಳನ್ನು ನೋಡುವಾಗ ನನಗೆ ನಮ್ಮ ದೇಶದ ಬಗ್ಗೆ ಇನ್ನಷ್ಟು ಅಭಿಮಾನ ಮೂಡಿತು.

ಟೋಕಿಯೋದಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ ಬಳಿಕ ನನ್ನ ಮಿತ್ರನ ಪತ್ನಿ ಕಂಪೆನಿಯೊಂದರಲ್ಲಿ ಔದ್ಯೋಗಿಕ ಆಪ್ತ ಸಲಹೆಗಾರರಾಗಿರುವ ಶ್ರೀಮತಿ ಫ್ರಸ್ಯೆ ಓಂದಾ ಅವರು ಕಾರಿನಲ್ಲಿ ನಮ್ಮ ಸ್ಥಳಕ್ಕೆ ಬಂದು ಅವರ ಊರಿಗೆ ಕರೆದುಕೊಂಡು ಹೋದರು. ದಾರಿ ಮಧ್ಯೆದಲ್ಲಿ "ನಿಮಗೆ ಯಾವ ಶೈಲಿಯ ಊಟವನ್ನು ನಾವು ನೀಡಲಿ?" ಎಂದು ನನ್ನಲ್ಲಿ ಕೇಳಿಕೊಂಡರು. "ನನ್ನ ಆಯ್ಕೆ ಜಪಾನಿ ಶೈಲಿಯ ಊಟ" ಎಂದು ಹೇಳಿದೆ. ಬಳಿಕ ನನ್ನನ್ನು ಜಪಾನಿ ಶೈಲಿಯ ಊಟ ಲಭ್ಯವಿರುವ ಒಂದು ಸುಂದರವಾದ ಹೋಟೆಲಿಗೆ ಕರೆತಂದರು. ಈ ಹೋಟೆಲಿನ ವಿಶಿಷ್ಟತೆ ಎಂದರೆ ನಮ್ಮ ಟೇಬಲ್‌ನ ಒಂದು ಬದಿಯಲ್ಲಿ ವಿವಿಧ ಬಗೆಯ ಆಹಾರಗಳ, ತಿಂಡಿತಿನಸುಗಳ ಫೋಟೋಗಳು ಸಿದ್ಧತೆಯ ಸಮಯ ಇತ್ಯಾದಿ ವಿವರಗಳೊಂದಿಗೆ ಸ್ಕ್ರೀನ್‌ನಲ್ಲಿ ಬರುತ್ತಾ ಇರುತ್ತವೆ. ನಮಗೆ ಬೇಕಾದ ಖಾದ್ಯಗಳನ್ನು ಒತ್ತಿದರೆ, ಅದರ ಕೆಳಗಡೆ ಟೇಬಲ್‌ಗೆ ತಾಗಿ ಕೆಲವು ನಿಮಿಷಗಳಲ್ಲಿ ನಮ್ಮ ಆಯ್ಕೆಯ ಖಾದ್ಯಗಳು ಸ್ವಯಂ ಚಾಲಿತವಾಗಿ ಬಂದು ಬೀಳುತ್ತವೆ. ನಾವು ಕೂಡಲೇ ಜಾಗರೂಕತೆಯಿಂದ ತಟ್ಟೆಗಳನ್ನು ಪಡಕೊಳ್ಳದಿದ್ದರೆ, ಅವುಗಳು ಹಾಗೆಯೇ ಪಟ್ಟಿಯಲ್ಲಿ ಮುಂದಕ್ಕೆ ಹೋಗಿ ಮತ್ತೆ ಪುನಃ ಸುತ್ತುಹಾಕಿ ಬರುತ್ತವೆ.

ಅನಂತರ ನನ್ನ ಮಿತ್ರ ಹಾಗೂ ಅವರ ಪತ್ನಿ ನನ್ನನ್ನು ಹಸುನುಮಾದ ಅವರ ಮನೆಗೆ ಕರೆದುಕೊಂಡು ಹೋದರು. ಅವರ ಇಬ್ಬರು ಗಂಡು ಮಕ್ಕಳು ಆಗ ಶಾಲೆಯಲ್ಲಿದ್ದರು. ದಾರಿಯಲ್ಲಿ ಹೋಗುವಾಗ ಅವರ ಶಾಲೆ ಮತ್ತು ಹುಟ್ಟಿದ ಆಸ್ಪತ್ರೆಯನ್ನು ನನಗೆ ತೋರಿಸಿದ್ದರು. ಅವರ ಮನೆಯಲ್ಲಿ ಜಪಾನಿ ಸಾಂಪ್ರದಾಯಿಕ ಸಿಹಿತಿಂಡಿ, ಚಹಾವನ್ನು ಸ್ವೀಕರಿಸಿ, ಫೋಟೋ ಕ್ಲಿಕ್ಕಿಸಿದ ನಂತರ ನನ್ನ ಗಮನ ಅವರ ಮನೆಯಲ್ಲಿದ್ದ ಒಂದು ಸುಂದರವಾದ ಪಿಯಾನೊ ಕಡೆಗೆ ಹೋಯಿತು. ಇಲ್ಲಿ ಈ ಪಿಯಾನೊವನ್ನು ಯಾರು ನುಡಿಸುತ್ತಾರೆಂದು ಕೇಳಿದೆ. ಆಗ ಶ್ರೀಮತಿ ಫ್ರಸ್ಯೆ ಅವರು "ನಾನು ಕಲಿಯುತ್ತಿದ್ದೇನೆ" ಎಂದು ಹೇಳಿದರು. "ನಾನೂ ನುಡಿಸಬಲ್ಲೇ" ಎಂದು ಹೇಳಿದೆ. ಅವರು ಅತ್ಯಂತ ಸಂತೋಷದಿಂದ "ನೀವು ನಮಗಾಗಿ ದಯವಿಟ್ಟು ಪಿಯಾನೊ ನುಡಿಸಿರಿ" ಎಂದು ಕೇಳಿಕೊಂಡರು. ನಾನು "ಸಾಯನಾರೊ......" ಹಾಡನ್ನು ಉಚ್ಚರಿಸಿ ನುಡಿಸಿದೆ. ಅವರಿಬ್ಬರೂ ಅದನ್ನು ಕೇಳಿ ಬಹಳ ಖುಷಿ ಪಟ್ಟರು. ನಂತರ ನಾನು ನಮ್ಮ ರಾಷ್ಟ್ರಗೀತೆಯನ್ನು ನುಡಿಸಿ ಇದು ನಮ್ಮ ದೇಶದ ರಾಷ್ಟ್ರಗೀತೆ ಎಂದು ಹೇಳಿದೆ. ನಂತರ, ಆ ಕೂಡಲೇ ಶ್ರೀಮತಿ ಫ್ರಸ್ಯೆಯವರು ಅವರ ಜಪಾನೀ ರಾಷ್ಟ್ರಗೀತೆ ಯನ್ನು ನುಡಿಸಿ "ಇದು ನಮ್ಮ ರಾಷ್ಟ್ರಗೀತೆ" ಎಂದು ಹೇಳಿ, ನಾವೆಲ್ಲರೂ ಒಟ್ಟಾಗಿ ಒಂದು ಸಂತೋಷ ಕ್ಷಣಗಳನ್ನು ಇಲ್ಲಿ ಹಂಚಿಕೊಂಡೆವು.

ಬಳಿಕ, ನಾನು ನನ್ನ ಮಿತ್ರನಲ್ಲಿ ಈ ಹಿಂದೆಯೇ ಭಾರತದಲ್ಲಿದ್ದಾಗಲೇ ಇಮೇಲ್‌ನಲ್ಲಿ ವ್ಯವಹರಿಸುತ್ತಿದ್ದ ಸಂದರ್ಭ ವಿನಂತಿಸಿಕೊಂಡಂತೆ, 'ಹಾಚಿ' ಅಥವಾ 'ಹಾಚಿಕೊ' ನಾಯಿಯ ಸ್ಮಾರಕವನ್ನು ನೋಡಲು ಹೋಗಲಿಕ್ಕಿತ್ತು. ಈ ಸ್ಮಾರಕವು ಟೋಕಿಯೋ ನಗರದ ಪೂರ್ವ ಭಾಗದಲ್ಲಿ 'ಶಿಬುಯಾ' ಎಂಬ ಪಟ್ಟಣದ ರೈಲು ನಿಲ್ದಾಣದ ಮುಂದಿದೆ. ನಾನು ಜಪಾನಿಗೆ ಬರುವ ಮೊದಲು ನನ್ನ ಮಿತ್ರನಲ್ಲಿ ಕೇಳಿಕೊಂಡ ಬೇಡಿಕೆ ಇಂದೊಂದೇ ಆಗಿತ್ತು. ಶಿಬುಯಾ ರೈಲ್ವೆ ನಿಲ್ದಾಣಕ್ಕೂ ಹಾಚಿಕೊ ಎಂದು ಹೆಸರಿಟ್ಟಿದ್ದಾರೆ. ಈ ನಾಯಿಯ ಸ್ಮಾರಕದ ಮುಂದೆ ಹಳೆಯ ಬಸ್ಸೊಂದರಲ್ಲಿ ನಾಯಿಯ ನಿಜವಾದ ಹಳೆಯ ವಿವಿಧ ಕಪ್ಪು ಬಿಳುಪು ಫೊಟೋಗಳನ್ನು ಪ್ರದರ್ಶಿಸಿರುವ ಮ್ಯೂಸಿಯಂ ಕೂಡಾ ಇದೆ. ಈ ನಾಯಿ 1924ರಿಂದ 1935ರ ವರೆಗೆ ಬದುಕಿದ್ದು ತನ್ನ ಒಡೆಯನ ಸಾವಿನ ನಂತರ 9 ವರ್ಷಗಳ ಕಾಲ ಅವರಿಗೋಸ್ಕರ, ತನ್ನ ಒಡೆಯನಿದ್ದ ಕಾಲ ನಡೆಯುತ್ತಿದ್ದ ದೈನಂದಿನ ಕಾರ್ಯದಂತೆ, ಈ ರೈಲ್ವೆ ನಿಲ್ದಾಣದ ಮುಂದೆ ಕಾದು ಸ್ವಾಮಿನಿಷ್ಠೆ ತೋರಿದ ನಾಯಿಯ ಸ್ಮಾರಕವಾಗಿದೆ. ನಾಯಿ ಸತ್ತ ನಂತರ ಜಪಾನಿ ಜನರ ಜನಾಭಿಪ್ರಾಯದ ಆಧಾರದಲ್ಲಿ ಈ ಸ್ಮಾರಕವನ್ನು ನಿರ್ಮಿಸಲಾಗಿದ್ದು, ಈ ನಾಯಿಯ ಕಥೆಯ ಆಧಾರದಲ್ಲಿ ರಚಿಸಿದ ಇಂಗ್ಲೀಷ್ ಸಿನೇಮಾ ಪ್ರಪಂಚದಾದ್ಯಂತ ಜನಪ್ರಿಯವಾಗಿದ್ದು ಸಿನೇಮಾವು ಹಲವಾರು ಪ್ರಶಸ್ತಿಗಳನ್ನು ಗಳಿಸಿತ್ತು. ಇಂಟರ್‌ನೆಟ್‌ನಲ್ಲಿ ಈ ಸಿನೇಮಾವು ಲಭ್ಯವಿರುವ ಕಾರಣ ಇಂದು ಆಸಕ್ತರಿಗೆ ಇದನ್ನು ನೋಡುವ ಅವಕಾಶವೂ ಇದೆ.

ಅನಂತರ ನನ್ನ ಮಿತ್ರ ರಾತ್ರಿ ನನ್ನೊಂದಿಗೆ ಯಕೊಹಾಮದವರೆಗೆ ಬಂದು, ನಾನು ಸುರಕ್ಷಿತವಾಗಿ ಹೋಟೆಲ್ ಸೇರಿದ ಬಳಿಕವೇ ಹಿಂದಿರುಗಿ ಹೋದರು. ಮರುದಿವಸ ಬೆಳಗ್ಗೆ ನಿಗದಿಯಂತೆ ಕಾದಿರಿಸಿದ ಟ್ಯಾಕ್ಸಿಯಲ್ಲಿ ಮೈಕ್ಯಾಟ್‌ವರೆಗೆ, ಅನಂತರ ಲೈಮಾಸಿನ್ ಏರ್‌ಪೋರ್ಟ್ ಬಸ್ಸಿನ ಮೂಲಕ ಟೋಕಿಯೋದ ನರಿತಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದು ಸೇರಿದೆ. ಬೆಳಗ್ಗೆ 10.30 ಗಂಟೆಗೆ ಮಲೇಶ್ಯಾದ ರಾಜಧಾನಿ ಕೌಲಾಲಾಂಪುರಕ್ಕೆ ಹೋಗುವ ಮಲೇಶಿಯನ್ ಏರ್‌ಲೈನ್ಸ್ ವಿಮಾನ ಏರಬೇಕಾಗಿತ್ತು. ಬಳಿಕ ಬೆಂಗಳೂರಿನ ಮೂಲಕ ಮರುದಿವಸ ಮಂಗಳೂರಿನ ವಿಮಾನ ನಿಲ್ದಾಣ ಸೇರಿ ನನ್ನೂರಿಗೆ ಬಂದೆ, ಸರ್ಟಿಫಿಕೇಟ್‌ಗಳನ್ನು ಸಂಘಟಕರು ಬಹಳ ವ್ಯವಸ್ಥಿತವಾಗಿ ಎಲ್ಲಾ ಪ್ರತಿನಿಧಿಗಳಿಗೆ ಇಮೇಲ್ ಮೂಲಕ ನಂತರ ಕಳುಹಿಸಿಕೊಟ್ಟಿದ್ದರು. ಜಪಾನ್ ದೇಶದಲ್ಲಿ ನಾನು ಅನುಭವಿಸಿದ ವಿಭಿನ್ನ ಕ್ಷಣಗಳು ಮತ್ತು ಘಟನೆಗಳಿಗೆ 'ಸಾಯಾನಾರೊ' ಎಂದು ಹೇಳಿದರೂ, ಅವುಗಳು ಜಪಾನಿನ ಬುಲೆಟ್ ಟ್ರೈನ್‌ಗಳಂತೆ ಮನಸ್ಸಿನಲ್ಲಿ ಸದಾ ಗೋಚರಿಸಿಕೊಂಡು ಕಣ್ಮರೆಯಾಗುತ್ತಿರುತ್ತವೆ.

## ಸಿಂಹ ಮಾಸದ ವಿಶೇಷ ದಿನಗಳು

| | |
|---|---|
| 15-08-2015 | ಶ್ರಾವಣಮಾಸಾರಂಭ |
| 17-08-2015 | ಸಿಂಹ ಸಂಕ್ರಮಣ |
| 17-08-2015 | ಮಖಾ ನಕ್ಷತ್ರಾರಂಭ |
| 19-08-2015 | ನಾಗರಪಂಚಮಿ |
| 26-08-2015 | ಸರ್ವೈಕಾದಶೀ |
| 27-08-2015 | ಪ್ರದೋಷ |
| 28-08-2015 | ಋಗುಪಾಕರ್ಮ, ವರಮಹಾಲಕ್ಷ್ಮೀ ವೃತ |
| 29-08-2015 | ಹುಣ್ಣಿಮೆ |
| 01-09-2015 | ಸಂಕಷ್ಟಹರ ಚತುರ್ಥಿ |
| 08-09-2015 | ಸರ್ವೈಕಾದಶೀ |
| 13-09-2015 | ಅಮಾವಾಸ್ಯೆ |
| 16-09-2015 | ಸ್ವರ್ಣಗೌರೀ ವೃತ |
| 17-09-2015 | ಗಣೇಶ ಚತುರ್ಥಿ |

# ವೈದ್ಯಕೀಯ ವೇದಿಕೆ–ಆರೋಗ್ಯ ಮಾಹಿತಿ

ಡಾ। ವೈ. ಸುದರ್ಶನ ರಾವ್



## ಸ್ವಚ್ಛತೆ ಹಾಗೂ ಆರೋಗ್ಯ

(...ಮುಂದುವರೆದುದು )

ಹೀಗೆ ನಾಗರಿಕ ಪ್ರಪಂಚದಲ್ಲಿ ತಯಾರಾಗುವ ವಿವಿಧ ತ್ಯಾಜ್ಯಗಳಿಂದ ನೆಲ, ಜಲ ಹಾಗೂ ವಾಯುಮಾಲಿನ್ಯ ಉಂಟಾಗುತ್ತದೆ. ಸೂಕ್ಷ್ಮಜೀವಿಗಳಿಂದ ಬರುವ ಸಾಂಕ್ರಾಮಿಕ ರೋಗಗಳಿಗೆ ಕಾರಣ ವಾಗುವುದು, ಕ್ಯಾನ್ಸರ್, ಉಬ್ಬಸದಂತಹಾ ಸಾಂಕ್ರಾಮಿಕವಲ್ಲದ ಇತರ ರೋಗಗಳಿಗೆ ಕಾರಣವಾಗುವುದು, ಕಸದ ರಾಶಿಯಿಂದಾಗಿ ಉದ್ಭವವಾಗುವ ಸಾಮಾಜಿಕ ಸಮಸ್ಯೆಗಳು (ಉದಾ: ಕಸದ ರಾಶಿಯಿಂದ ನೀರಿನ ಚರಂಡಿಗಳು ತುಂಬಿ ಹೋಗುವುದು, ಕೈಕಾಲುಗಳಿಗೆ ಚುಚ್ಚಿ ಗಾಯವಾಗುವ ಅಪಾಯ, ಸೊಳ್ಳೆ ನೊಣಗಳ ಉತ್ಪತ್ತಿಯ ತಾಣವಾಗುವುದು, ವಾಸನೆ ಬರುವುದು, ಗಲೀಜು ಕಾಣುವುದು) ಈ ತ್ಯಾಜ್ಯ ಗಳಿಂದುಂಟಾಗುವ ಸಮಸ್ಯೆಗಳು. ಈ ಎಲ್ಲಾ ಕಾರಣಗಳಿಗಾಗಿ ಈ ತ್ಯಾಜ್ಯಗಳನ್ನು ವಿಲೇವಾರಿ ಮಾಡುವ ಅಗತ್ಯ ಬೀಳುತ್ತದೆ. ತ್ಯಾಜ್ಯಗಳನ್ನು ವಿಲೇವಾರಿ ಮಾಡುವ ವಿಧಾನಗಳನ್ನು ನೇರವಾಗಿ ಕೈಗೆತ್ತಿಕೊಳ್ಳುವ ಬದಲು ಯಾವ ಯಾವ ತ್ಯಾಜ್ಯದಿಂದ ಯಾವ ಯಾವ ಸಮಸ್ಯೆ ಉದ್ಭವವಾಗುತ್ತದೆ, ಹೇಗೆ ಉದ್ಭವವಾಗುತ್ತದೆನ್ನುವುದನ್ನು ಮನನಮಾಡಿಕೊಂಡರೆ, ಆಯಾತ್ಯಾಜ್ಯವನ್ನು ವಿಲೇವಾರಿ ಮಾಡುವ ವಿಧಾನವು ತನ್ನಿಂತಾನಾಗೆ ಸ್ಪಷ್ಟವಾಗುತ್ತದೆ.

ಮೊದಲನೆಯದು ಮಲ ಮೂತ್ರಾದಿ ದೇಹದ ತ್ಯಾಜ್ಯಗಳು: ದುರ್ವಾಸನೆ ಬೀರುವುದು ಈ ತ್ಯಾಜ್ಯದ ಮೊದಲನೆಯ ಸಮಸ್ಯೆ. ನೂರಾರು ಬಗೆಯ ಸಾಂಕ್ರಾಮಿಕ ರೋಗ ತರುವ ರೋಗಾಣುಗಳು ಈ ತ್ಯಾಜ್ಯದಲ್ಲಿರುತ್ತದೆ. ಉದಾಹರಣೆಗೆ ಹೆಪಟೈಟಿಸ್, ಕಾಲಾರಾ, ವಾಂತಿಭೇದಿ, ಟೈಫಾಯ್ಡ್, ಇಲಿಜ್ವರ, ಜಂತು ಹುಳಗಳು, ಅಮೀಬಿಯಾಸಿಸ್, ಜಿಯಾರ್ಡಿಯಾಸಿಸ್, ಸಾಲ್ಮನೆಲ್ಲೋಸಿಸ್, ಪೋಲಿಯೋ ಖಾಯಿಲೆ ಗಳ ರೋಗಾಣುಗಳು ಈ ತ್ಯಾಜ್ಯದಲ್ಲಿರುತ್ತವೆ. ಎಲ್ಲೆಲ್ಲಿ ವಿಸರ್ಜಿಸಿದ ಈ ತ್ಯಾಜ್ಯಗಳು ಮಳೆ ನೀರಿನೊಂದಿಗೆ ನಾವು ಕುಡಿಯುವ ನೀರನ್ನು ಸೇರಿಕೊಳ್ಳುತ್ತವೆ. ಅದರೊಂದಿಗೆ ಈ ಸೂಕ್ಷ್ಮಜೀವಿಗಳು ಕುಡಿಯುವ ನೀರಿಗೆ ವರ್ಗಾವಣೆಯಾಗುತ್ತವೆ. ಈ ತ್ಯಾಜ್ಯದ ಮೇಲೆ ಕುಳಿತ ನೊಣದ ಕಾಲಿಗೆ ಅಂಟಿಕೊಂಡ ಸೂಕ್ಷ್ಮಜೀವಿಗಳು ಆ ನೊಣವು ನಾವು ತಿನ್ನುವ ಆಹಾರದ ಮೇಲೆ ಕುಳಿತಾಗಲೂ ಸೂಕ್ಷ್ಮಜೀವಿಗಳ ವರ್ಗಾವಣೆಯಾಗುತ್ತದೆ. ಜನರಿಗಿರುವ ಸಿಕ್ಕಲೆಲ್ಲಾ ಉಗುಳುವುದು, ಸಿಂಬಳ ಒರೆಸುವುದು ಇತ್ಯಾದಿ ಸ್ವಭಾವಗಳಿಂದಾಗಿ ಯಾವ ಸ್ಥಳದಲ್ಲಿ ಸೂಕ್ಷ್ಮಜೀವಿಗಳಿದ್ದಾವು, ಯಾವ ರೀತಿ ಈ ಜೀವಿಗಳು ನಮ್ಮ ಕೈಗೆ ಅಥವಾ ಆಹಾರಕ್ಕೆ ವರ್ಗಾವಣೆಯಾದಾವು (ಉದಾ ತರಕಾರಿ ಮಾರ್ಕೆಟ್‌ನಲ್ಲಿ ಎಲ್ಲೆಂದರಲ್ಲಿ ಉಗುಳುವುದು ಹಾಗೂ ಎಲ್ಲೆಂದರಲ್ಲಿ ತರಕಾರಿ ರಾಶಿ ಹಾಕಿರುವುದು, ಶೌಚಾಲಯದ ನಳ್ಳಿಯ ಹಿಡಿಗಳನ್ನು ಮುಟ್ಟಿದ ಕೈಗಳು) ಎಂದು ಊಹಿಸುವುದು ಕಷ್ಟದ ಕೆಲಸವಾಗಿದೆ. ಎಲ್ಲರೂ ಉಗುಳಾಗಲಿ, ವಾಂತಿಯಾಗಲಿ, ಮೂತ್ರ ವಾಗಲಿ ಕಫ, ಸಿಂಬಳವಾಗಲಿ ಮಲವಾಗಲಿ ಪ್ರತಿಯೊಂದನ್ನೂ ಶೌಚಾಲಯದಲ್ಲೇ ವಿಸರ್ಜಿಸಬೇಕು. ಇಲ್ಲಿ ವಿಸರ್ಜಿಸಿದ ತ್ಯಾಜ್ಯವು ಒಂದು ಕೊಳವೆಯ ಮೂಲಕ ಎಲ್ಲಾ ಬದಿಗಳಿಂದ ಮುಚ್ಚಿರುವ ಹೊಂಡವೊಂದನ್ನು ಸೇರುತ್ತದೆ. ಕೊಳವೆಯ ಮೂಲಕವೂ ನೊಣಗಳು ಈ ಹೊಂಡವನ್ನು ಪ್ರವೇಶಿಸದಂತೆ ಅದರಲ್ಲಿ "ು" ಆಕೃತಿಯ ನೀರು ತುಂಬಿದ ಒಂದು ಟ್ರಾಪ್ ಇರುತ್ತದೆ. ಈ ಹೊಂಡವು ಯಾವುದೇ ನೀರಿನ ಮೂಲಕ್ಕಿಂತ ಕನಿಷ್ಟ 50 ಅಡಿ ದೂರವಿದ್ದರೆ ಸಾಕು. ಸಾರ್ವತ್ರಿಕವಾಗಿ ಎಲ್ಲರೂ ಶೌಚಾಲಯದಲ್ಲೆ ನಮ್ಮ ದೇಹದ ತ್ಯಾಜ್ಯಗಳನ್ನು ವಿಸರ್ಜಿಸಿದರೆ ಮೇಲೆ ಉದಾಹರಿಸಿದ ಖಾಯಿಲೆಗಳನ್ನು ನೂರಕ್ಕೆ ನೂರು ನಿರ್ಮೂಲನಮಾಡಬಹುದು ಹಾಗೂ ದುರ್ವಾಸನೆಯ ಸಮಸ್ಯೆಯೂ ಇರುವುದಿಲ್ಲ.

ಎರಡನೆಯ ತ್ಯಾಜ್ಯ ಸತ್ತ ದೇಹದ್ದು. ಮನುಷ್ಯರ ದೇಹವು ಸುಡುವುದೋ ಹೂಳುವುದೋ ಮಾಡಿ ವಿಲೇವಾರಿಯಾಗುತ್ತದೆ. ಆದರೆ ಇತರ ಸತ್ತ ಪ್ರಾಣಿಗಳ ದೇಹಗಳಿಂದ ಸ್ಕ್ಯಾವೆಂಜರ್‌ಗಳೆಂಬ ಸತ್ತ ಜೀವಿಯ ದೇಹವನ್ನು ತಿನ್ನುವ ವರ್ಗವೊಂದಿಲ್ಲದಿದ್ದಲ್ಲಿ ಇಡೀ ಪ್ರಪಂಚವೇ ಸ್ಮಶಾನವಾಗುತ್ತಿತ್ತೆಂಬುದಕ್ಕೆ ಸಂಶಯವಿಲ್ಲ. ಸಸ್ಯಗಳ ಎಲೆಗಳು, ಕಾಂಡಗಳನ್ನೂ ಈ ತ್ಯಾಜ್ಯ ವರ್ಗಕ್ಕೇ ಸೇರಿಸಬೇಕು. ಸತ್ತ ದೇಹವನ್ನು ತೊಯ್ಯಿಸಿದ ಮಳೆಯ ನೀರು ಕುಡಿಯುವ ನೀರಿನ ಮೂಲವನ್ನು ಸೇರಿಕೊಂಡರೆ ಅನೇಕ ಸೂಕ್ಷ್ಮಜೀವಿಗಳೂ ಈ ನೀರಿಗೆ ವರ್ಗಾವಣೆಯಾಗುತ್ತವೆ. ಸತ್ತ ದೇಹವು ದುರ್ವಾಸನೆ ಬೀರುತ್ತದೆ. ದುರ್ವಾಸನೆಯುಕ್ತ ಗಾಳಿಯಲ್ಲೂ ಸೂಕ್ಷ್ಮಜೀವಿಗಳಿರುತ್ತದೆ. ಈ ತ್ಯಾಜ್ಯಗಳು ಪ್ರಾಕೃತಿಕವಾಗಿ ವಿಲೇವಾರಿಯಾಗಿ ಗೊಬ್ಬರವಾಗುವ ಗುಣವುಳ್ಳದ್ದರಿಂದ ಒಂದು ಹೊಂಡ ತೋಡಿ ಮಣ್ಣು ಮುಚ್ಚುವುದಷ್ಟೇ ಅದರ ವಿಲೇವಾರಿಗೆ ಬೇಕಾದ ಶ್ರಮ. ಸತ್ತ ದೇಹವನ್ನು ಹೊಂಡ ತೋಡಿ ಮಣ್ಣು ಮುಚ್ಚಿದರೆ ದುರ್ವಾಸನೆಯಿಂದಲೂ ಮುಕ್ತಿಸಿಗುತ್ತದೆ ಹಾಗೂ ದೇಹವೂ ಸ್ವಲ್ಪ ದಿನಗಳಲ್ಲೇ ಮಣ್ಣಾಗಿ ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ. ಹೂಳುವಾಗ ಮಾತ್ರಾ ಕೆರೆ ಬಾವಿಗಳಿಂದ ದೂರ ಹೂಳಬೇಕು.

ಮೂರನೆಯ ಮುಖ್ಯ ತ್ಯಾಜ್ಯವಾದ ತಿಂದುಳಿದ ಆಹಾರ ಪದಾರ್ಥವು ಕೊಳೆತು ನಾರುವುದು, ನಾಯಿ ಬೆಕ್ಕುಗಳು ಎಳೆದಾಡುವುದು, ಕೊಳೆಯುವಾಗ ಅದರಲ್ಲಿ ಬೆಳೆದ ಸೂಕ್ಷ್ಮಜೀವಿಗಳು ಕುಡಿಯುವ ನೀರು ಸೇರುವುದು ಈ ಮೂರು ಸಮಸ್ಯೆಗಳನ್ನುಂಟು ಮಾಡುತ್ತದೆ. ತೋಟದ ಮೂಲೆಯಲ್ಲಿ ದೊಡ್ಡ ಹೊಂಡವನ್ನು ತೋಡಿಟ್ಟುಕೊಂಡು ದಿನವೂ ಉತ್ಪತ್ತಿಯಾದ ಈ ತ್ಯಾಜ್ಯವನ್ನು ಸುರಿದು ಅದರ ಮೇಲೊಂದಿಷ್ಟು ಮಣ್ಣು ಸುರಿದು ಬಂದರೆ ಸಾಕು, ಈ ತ್ಯಾಜ್ಯ ಸಮರ್ಪಕವಾಗಿ ವಿಲೇವಾರಿಯಾದಂತೆಯೇ. ಹೀಗೆ ಮಣ್ಣು ಮುಚ್ಚಿ ಬಂದ ಈ ತ್ಯಾಜ್ಯವನ್ನು ಇರುವೆ, ಎರೆಹುಳಗಳು ತಿಂದು ಗೊಬ್ಬರವನ್ನಾಗಿ ಪರಿವರ್ತಿಸುತ್ತವೆ. ವರ್ಷಕ್ಕೊಮ್ಮೆ ಈ ಹೊಂಡವನ್ನು ಖಾಲಿ ಮಾಡಿಗೊಬ್ಬರವನ್ನು ಕೈದೋಟಕ್ಕೆ ಉಪಯೋಗಿಸಬಹುದು. ಪ್ರಾಣಿಗಳ ಮಲ ಹಾಗೂ ತಿಂದುಳಿದ ಆಹಾರ ಪದಾರ್ಥಗಳಿಂದ ಗೋಬರ್‌ಗ್ಯಾಸ್ ತಯಾರಿಸುವ ಘಟಕಗಳನ್ನು ಸ್ಥಾಪಿಸುವುದು ಪ್ರಕೃತಿಸ್ನೇಹಿ ಕ್ರಮವಾಗಿದ್ದರೂ ಯಾಕೋ ನಾನಾ ಕಾರಣಗಳಿಂದ ಜನಪ್ರಿಯವಾಗಿಲ್ಲ.

ಕೊಚ್ಚೆ ನೀರು ಒಂದು ನಿರ್ಲಕ್ಷಿತ ತ್ಯಾಜ್ಯ. ಮನೆಯ ಬಚ್ಚಲಿನ ನೀರನ್ನು ತೋಟದ ಗಿಡವೊಂದಕ್ಕೆ ಬಿಟ್ಟರೆ ಅದರ ವಿಲೇವಾರಿಯಾಯಿತೆಂದೇ ಎಲ್ಲರೂ ತಿಳಿದಿದ್ದಾರೆ. ತೆರೆದ ಹೊಂಡಕ್ಕೆ ಕೊಚ್ಚೆ ನೀರನ್ನು ಬಿಡುವುದರಿಂದ ಈ ನೀರಿನಲ್ಲಿ ಸೊಳ್ಳೆಗಳು ಮರಿ ಇಡುತ್ತವೆ. ಸೊಳ್ಳೆಗಳಿಂದ ಬರುವ ರೋಗಗಳ ಪಟ್ಟಿ ನೀಡುವ ಅಗತ್ಯವಿಲ್ಲವೆಂದುಕೊಳ್ಳುತ್ತೇನೆ. ಈ ನೀರು ಕುಡಿಯುವ ನೀರಿನ ಮೂಲ ಸೇರಿದರೆ ಅದರಲ್ಲಿರುವ ಸೂಕ್ಷ್ಮ ಜೀವಿಗಳೂ ಕುಡಿಯುವ ನೀರನ್ನು ಸೇರಿಕೊಳ್ಳುತ್ತವೆ. ಶೌಚಾಲಯದಂತೆ ಈ ನೀರನ್ನೂ ಎಲ್ಲಾ ಬದಿಯಿಂದ ಮುಚ್ಚಿರುವ ಹೊಂಡಕ್ಕೇ ಬಿಡತಕ್ಕದ್ದು. ಪೇಟೆಗಳಲ್ಲಿ ಬಹು ಮಹಡಿ ಕಟ್ಟಡಗಳಿಂದ ಬಂದ ನೀರನ್ನು ಕೊಳವೆಗಳ ಮೂಲಕ ಅಥವಾ ಒಳಚರಂಡಿಗಳ ಮೂಲಕ ಸಂಗ್ರಹಿಸಿ ಶುದ್ಧೀಕರಣ ಸ್ಥಾವರಗಳಲ್ಲಿ ಶುದ್ಧೀಕರಿಸಿ ನಂತರ ಮರಗಿಡಗಳಿಗೆ ಉಣಿಸಬಹುದು. ಕಾರ್ಖಾನೆಯಿಂದ ಹೊರ ಬಂದ ನೀರಿನಲ್ಲಿ ದೇಹಕ್ಕೆ ಕ್ಯಾನ್ಸರ್‌ನಂತಹಾ ಖಾಯಿಲೆ ತರುವ ರಾಸಾಯನಿಕಗಳಿರುತ್ತವೆ. ಹೆಚ್ಚಿನ ಕಾರ್ಖಾನೆಯವರು ಈ ನೀರನ್ನು ನದಿಗೋ ಸಮುದ್ರಕ್ಕೋ ಬಿಟ್ಟರೆ ತಮ್ಮ ಕೆಲಸವಾಯಿತೆಂದು ತಿಳಿದಿದ್ದಾರೆ. ಈ ನೀರನ್ನು ಸಂಸ್ಕರಿಸಿ, ಅದರಲ್ಲಿರುವ ಅಪಾಯಕಾರೀ ರಾಸಾಯನಿಕಗಳನ್ನು ತೆಗೆದ ನಂತರವೇ ನದಿಗೆ ಬಿಡತಕ್ಕದ್ದು ಅಥವಾ ಗಿಡಮರಗಳಿಗೆ ಉಣಿಸತಕ್ಕದ್ದು. ಇಲ್ಲವಾದಲ್ಲಿ ಈ ರಾಸಾಯನಿಕಗಳನ್ನು ಸೇವಿಸಿದ ಮೀನುಗಳಲ್ಲೂ, ಗಿಡಗಳಲ್ಲಿ ಬೆಳೆದ ಆಹಾರ ಪದಾರ್ಥದಲ್ಲೂ ಈ ರಾಸಾಯನಿಕ ಗಳಿರುತ್ತವೆ.

(ಮುಂದುವರೆಯುವುದು)

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

# ಪ್ರಾಚೀನ ಋಷಿಗಳ ಕೊಡುಗೆಗಳು

–ರಾಮಮೂರ್ತಿ ಶಾಸ್ತ್ರೀ, ಬೆಂಗಳೂರು

ಧರ್ಮವೇ ಅಧರ್ಮವಾಗಿ ತಲೆ ಎತ್ತಿ ನಿಂತಾಗ ಅಧರ್ಮವನ್ನು ಅಳಿಸಲು ಕಾಲಕ್ಕೆ ತಕ್ಕಂತೆ ಅನೇಕ ಮಹಾತ್ಮರ ಜನನ ಈ ಜನ್ಮಭೂಮಿಯಲ್ಲಿ ಆಗಿದೆ. ಅಷ್ಟಕ್ಕೂ ಈ ಜನ್ಮಭೂಮಿ ನಿಃಸ್ವಾರ್ಥವೆಂಬ ಅಮೃತವನ್ನೇ ಉಣಿಸುತ್ತದೆ. ಭಾರತ ಎಂದರೆ (ಭಾ–ಎಂದರೆ ಜ್ಞಾನ ಮತ್ತು ರತ ಎಂದರೆ ಆಸಕ್ತ) ಎಲ್ಲಾ ವಿಧದ ವಿದ್ಯೆಗಳಲ್ಲೂ ಆಸಕ್ತ ಎಂದರ್ಥ. ಅಂತಹ ಎಲ್ಲಾ ವಿದ್ಯೆಗಳನ್ನು ಸಂಪಾದಿಸಿದ ನಮ್ಮ ಪ್ರಾಚೀನ ಋಷಿಗಳು ಅದನ್ನು ಲೋಕಹಿತಕ್ಕಾಗಿ ಬಳಸಿದರು.

ಋಷಿ ಎಂದರೇನು? ದೇವಿ ಭಾಗವತದಲ್ಲಿ– ಋಷಿರೇವೇತಿ ವಿಜ್ಞೇಯಃ ದ್ರವ್ಯಾಣಾಂ ಗುಣದೋಷವಿತ್–ಅರ್ಥಾತ್ ಭೌತ ಪ್ರಪಂಚದ ವಸ್ತುಗಳ ವಿಶ್ಲೇಷಣೆ ಮಾಡಿ ಅದರ ಒಳಮರ್ಮಗಳನ್ನು ಅರಿತು ಅದನ್ನು ಲೋಕಹಿತಕ್ಕಾಗಿ ಬಳಸುವವನೇ ಋಷಿ ಎಂದರ್ಥ. ಇಂತಹ ನಮ್ಮ ಋಷಿಗಳು 18 ವಿದ್ಯೆಗಳನ್ನು ವಿಧಿಸಿದರು. ಅದು ಹೀಗಿದೆ. ಪುರಾಣ, ನ್ಯಾಯಶಾಸ್ತ್ರ, ಮೀಮಾಂಸಾ, ಧರ್ಮಶಾಸ್ತ್ರ, ಛಂದಶಾಸ್ತ್ರ, ವ್ಯಾಕರಣ, ಕಲ್ಪಸೂತ್ರಗಳು, ಜ್ಯೋತಿಷ, ಶೀಕ್ಷಾ, ನಿರುಕ್ತ. 4 ವೇದಗಳು. ಆಯುರ್ವೇದ, ಧನುರ್ವೇದ, ಗಾಂಧರ್ವ, ಶಿಲ್ಪ. ಈ 18ರಲ್ಲಿ ನಕ್ಷತ್ರ ವಿದ್ಯೆಯೂ ಒಂದು. ನಕ್ಷತ್ರ ವಿದ್ಯೆಯೆಂದರೆ ಜ್ಯೋತಿಶ್ಯಾಸ್ತ್ರ– ಭೂಗೋಳ–ಖಗೋಳಶಾಸ್ತ್ರ ಅವುಗಳ ಸಂಬಂಧ–ಆಕರ್ಷಣೆ, ವಿಕರ್ಷಣೆಗಳು– ಅದರಿಂದಾಗಿ ಜಡ ಮತ್ತು ಚೇತನ ವಸ್ತುಗಳ ಮೇಲಾಗುವ ಪರಿಣಾಮಗಳನ್ನು ಕುರಿತು ಅಧ್ಯಯನ.

ಸಂಖ್ಯಾಶಾಸ್ತ್ರದಲ್ಲಿ 18ಕ್ಕೆ ಅಷ್ಟಾದಶ ಎನ್ನುತ್ತಾರೆ. ಇಲ್ಲಿ ದಶ ಎಂದರೆ ಪೂರ್ಣ– ಅಷ್ಟ ಎಂದರೆ ಹೊಂದುವುದು ಎಂದರ್ಥ 18 ವಿದ್ಯೆಗಳನ್ನು ತಿಳಿಯುವುದು ಎಂದರೆ, ಲೌಕಿಕ, ವೈಜ್ಞಾನಿಕ, ವೈದಿಕ ಮತ್ತು ಆಧ್ಯಾತ್ಮಿಕ ವಿದ್ಯೆಗಳನ್ನೆಲ್ಲಾ ಅರಿಯುವುದು.

ಈ ಎಲ್ಲಾ ವಿದ್ಯೆಗಳನ್ನು ನಮ್ಮ ಹಿರಿಯರು ಅರಿತು ಅದನ್ನು ವಿಶ್ವಕ್ಕೂ ಅರ್ಪಿಸಿದರು. ಎಡಪಂಥೀಯರು ದೂರುವ ಮನು ಮಹರ್ಷಿ ಹೇಳುತ್ತಾನೆ ;

ಏತದ್ದೇಶ ಪ್ರಸೂತಸ್ಯ ಸಕಾಶಾದಗ್ರಾ ಜನ್ಮನಃ।
ಸ್ವಂಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ।

ಜ್ಞಾನವನ್ನು ಹೊಂದಿರುವ ವ್ಯಕ್ತಿಯಿಂದ ಪ್ರಪಂಚದಲ್ಲಿರುವ ಎಲ್ಲಾ ಜನರೂ ಅವರವರಿಗೆ ಬೇಕಾದ್ದನ್ನು ಕಲಿತುಕೊಂಡು ಹೋಗಲಿ. ಎಷ್ಟೊಂದು ಉದಾರವಾದ ಮನಸ್ಸು ನಮ್ಮ ಹಿರಿಯರದ್ದಾಗಿತ್ತು ! ಆದರೆ ನಮ್ಮನ್ನಾಳಿದ ಆಂಗ್ಲರು ನಮ್ಮ ಇತಿಹಾಸ, ಸಂಸ್ಕೃತಿ, ಆಚಾರ, ವಿಚಾರಗಳನ್ನೆಲ್ಲಾ ವಿಧ್ವಂಸಗೊಳಿಸಿದರು. ಇಂದು ಸತ್ಯದ ಅನಾವರಣ ಆಗುತ್ತಿದೆ. ಈ ದೇಶ ಮತ್ತೆ ಚಿಗುರುತ್ತಿದೆ. ಈ ದೇಶಕ್ಕೆ ಎಂದೆಂದಿಗೂ ಅಂತ್ಯವಿಲ್ಲ.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ ಉಡುಪಿ - 576 101. ಫೋನ್ : 2522408

**ಆಕರ್ಷಕ ಬಡ್ಡಿದರದಲ್ಲಿ ಸಂಘದ ಸಾಲ ಯೋಜನೆಗಳು**

1. **ಗೃಹಸಾಲ/ಆಸ್ತಿಸಾಲ/ಅಡಮಾನದ ಸಾಲ**
ಸಂಘದ ಪ್ರಾಥಮಿಕ ಸದಸ್ಯರಿಗೆ ಗೃಹ ನಿರ್ಮಾಣ, ವಾಸದ ಮನೆಯ ಖರೀದಿಗಾಗಿ, ಅಥವಾ ವಾಸದ ಮನೆಯ ವಿಸ್ತರಣೆಗಾಗಿ ಹಾಗೂ ವಿದ್ಯಾಭ್ಯಾಸಕ್ಕಾಗಿ ಪರಿವರ್ತಿತ ಭೂಮಿ, ಕಟ್ಟಡಗಳ ಆಧಾರದ ಮೇಲೆ ಮೌಲ್ಯಮಾಪಕರು ಮತ್ತು ಕಾನೂನು ತಜ್ಞರ ಅಭಿಪ್ರಾಯವನ್ನು ಆಧರಿಸಿ **ಶೇ.11.50** ಬಡ್ಡಿದರದಲ್ಲಿ ಸಾಲ ಸೌಲಭ್ಯ ನೀಡಲಾಗುವುದು.
2. **ಶಿಕ್ಷಣ ಸಾಲ :** ಸಂಘದ ಪ್ರಾಥಮಿಕ ಸದಸ್ಯರ ಉನ್ನತ ಶಿಕ್ಷಣಕ್ಕೆ **ಶೇ.13.00** ಬಡ್ಡಿದರದಲ್ಲಿ ಶಿಕ್ಷಣ ಸಾಲ ಸೌಲಭ್ಯ ನೀಡಲಾಗುವುದು.

* ಷರತ್ತುಗಳು ಅನ್ವಯಿಸಲ್ಪಡುತ್ತವೆ.

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ.**

ಪ್ರಧಾನ ಕಛೇರಿ – ದೂರವಾಣಿ : 2522408 ; ಕುಕ್ಕಿಕಟ್ಟೆ ಶಾಖೆ – ದೂರವಾಣಿ : 2592133
ಪಡುಬಿದ್ರಿ ಶಾಖೆ – ದೂರವಾಣಿ : 2556608 ; ಕೋಟೇಶ್ವರ ಶಾಖೆ – ದೂರವಾಣಿ : 9341854114

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ

## ಅರ್ಜಿ ಆಹ್ವಾನ

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2015-2016ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಅರ್ಜಿ ಫಾರಂನ್ನು ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2015ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು, ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),**
**ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಉದಯಚಂದ್ರ ಪ್ರತಿಭಾ ಪುರಸ್ಕಾರ 2015-16

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2014-15ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2015ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%* ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ‍್ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು ''ಸಂಚಾಲಕರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102'' ಇಲ್ಲಿಗೆ ಕಳುಹಿಸಬೇಕು. ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು. ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

*(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ‍್ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ‍್ಯಾಂಕ್‌ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ‍್ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2015ರ ಒಳಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ. **-ಕಾರ್ಯದರ್ಶಿ**

## ಪ್ರಕಟಣೆ

**ಪ್ರತೀ ವರ್ಷವೂ ಶ್ರೀ ಶೃಂಗೇರಿ ಶ್ರೀ ಶಾರದಾ ಪೀಠದ ಶಿಷ್ಯರಾದ ಸ್ಥಾನಿಕ ಬ್ರಾಹ್ಮಣ ಸಮಾಜದವರೆಲ್ಲರೂ ಗಣೇಶ ಚತುರ್ಥಿಯ ಮುಂಚಿನ ಆದಿತ್ಯವಾರ ಚಾತುರ್ಮಾಸ ವ್ರತದಲ್ಲಿ ನಿರತರಾಗಿರುವ ಜಗದ್ಗುರುಗಳನ್ನು ಭೇಟಿಯಾಗಿ ಆಶೀರ್ವಾದ ಪಡೆದು ಬರುವುದು ನಿರಂತರವಾಗಿ ನಡೆದು ಬರುತ್ತಿದೆ. ಈ ವರ್ಷ ಗುರುಗಳು ಶಿಷ್ಯ ಸ್ವೀಕಾರ ಮಾಡಿದ್ದು, ಇಬ್ಬರನ್ನೂ ಭೇಟಿಮಾಡುವ ಸುಸಂಧರ್ಭ ಒದಗಿದೆ. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು ಇದರ ವತಿಯಿಂದ ತಾ 13-09-2015 ರ ರವಿವಾರದಂದು ಸಂಘದ ಸದಸ್ಯರೆಲ್ಲರೂ ಕೂಡಿ ಗುರುಗಳ ಭೇಟಿಗೆ ತೆರಳುವರೇ ವಾಹನ ಹಾಗೂ ಶ್ರೀಮಠದಲ್ಲಿ ವಸತಿ ಹಾಗೂ ಉಪಾಹಾರ/ಪ್ರಸಾದ ಭೋಜನದ ವ್ಯವಸ್ಥೆ ಮಾಡಿರುತ್ತೇವೆ. ಈ ವಾಹನವು ಶ್ರೀ ಶಾರದಾ ಮಂಟಪದಿಂದ ಬೆಳಿಗ್ಗೆ ಏಳು ಗಂಟೆಗೆ ಹೊರಟು ಸಂಜೆ ಆರು ಗಂಟೆಗೆ ಹಿಂದಿರುಗುವುದು. ನಮ್ಮ ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗಿಗಳಾಗಬೇಕು ಹಾಗೂ ಈ ಭೇಟಿಗೆ ಜೊತೆಯಾಗುವವರು ಸಂಘದ ಮ್ಯಾನೇಜರ್ ಅಜಿತ್ ರಾವ್ (ಫೋನ್:9448108920, 08202520754) ಆಥವಾ ದೇವಸ್ಥಾನ ವೇದಿಕೆಯ ಅಧ್ಯಕ್ಷರಾದ ಶ್ರೀ ವೈ.ವಿಠಲ ರಾವ್ (ಫೋನ್:9449451736)ಅಥವಾ ಯುವ ವೇದಿಕೆಯ ಸಂಚಾಲಕರಾದ ಕರಂಬಳ್ಳಿ ವಸಂತ ರಾವ್(9632291183)ರಲ್ಲಿ ತಮ್ಮ ಹೆಸರನ್ನು ತಿಳಿಸಬೇಕಾಗಿ ವಿನಂತಿ. ವಾಹನ ಶುಲ್ಕವನ್ನುಒಬ್ಬರಿಗೆ 300 ರೂ ಗಳೆಂದು ನಿಗದಿಪಡಿಸಲಾಗಿದೆ. ಹೊರೆಕಾಣಿಕೆಗೆ ಹಾಗೂ ಪಾದಪೂಜೆಗೆ ಅವಕಾಶವಿದೆ.**

**ತಾ। 28-08-2015 ನೇ ಶುಕ್ರವಾರ ಬೆಳಿಗ್ಗೆ 10-00 ಗಂಟೆಯ ನಂತರ ಶ್ರೀ ಶಾರದಾ ಮಂಟಪದ ಜ್ಞಾನಮಂದಿರದಲ್ಲಿ ಉಪಾಕರ್ಮ ಪ್ರಯುಕ್ತ ಹೋಮಹವನಾದಿಗಳು ಜರುಗಲಿರುವವು. ಶ್ರೀ ಶಾರದಾ ದೇವಸ್ಥಾನದಲ್ಲಿ 12-00 ಗಂಟೆಗೆ ಮಹಾಪೂಜೆಯ ಬಳಿಕ ಪ್ರಸಾದ ಭೋಜನದ ಏರ್ಪಾಡೂ ಮಾಡಲಾಗಿದೆ . ಅದೇ ದಿನ ಸಂಜೆ ನಾಲ್ಕು ಗಂಟೆಯ ನಂತರ ಮಹಿಳಾ ವೇದಿಕೆಯ ವತಿಯಿಂದ ವರಮಹಾಲಕ್ಷ್ಮೀ ಪೂಜೆಯೂ ನಡೆಯಲಿದೆ ಸಂಜೆ ಉಪಾಹಾರದ ವ್ಯವಸ್ಥೆ ಮಾಡಲಾಗುವುದು. ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ವಿದ್ಯಾರ್ಥಿ ವೇತನ ವೇದಿಕೆ

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

**ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2015ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ,**
ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ : | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ : | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ : | ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.01-09-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.19-08-2015ಕ್ಕೆ ನಾಗರಪಂಚಮಿ ಆಚರಣೆ ಬೆಳಿಗ್ಗೆ 10-00ರಿಂದ ಮಧ್ಯಾಹ್ನ 12-00ರ ತನಕ**

**ತಾ.25-08-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.03-09-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.11-09-2015 ಸೋಣ ತಿಂಗಳ ಕೊನೆಯ ಶುಕ್ರವಾರದಂದು ಸಂಜೆ ಮಹಿಳಾ ವೇದಿಕೆಯಿಂದ ಹೂವಿನ ಪೂಜೆ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳವರ ಚಾತುರ್ಮಾಸ್ಯ ವ್ರತ

ಪರಮಪೂಜ್ಯ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳವರು ಈ ಮನ್ಮಥ ಸಂವತ್ಸರದ ಚಾತುರ್ಮಾಸ್ಯ ವ್ರತವನ್ನು ಭಕ್ತ-ಶಿಷ್ಯ ಜನರ ಅಪೇಕ್ಷೆಯ ಮೇರೆಗೆ ಶ್ರೀ ಕೋದಂಡಾಶ್ರಮ ಮಠ, ಹೆಬ್ಬೂರು, ತುಮಕೂರು ತಾಲೂಕು ಇಲ್ಲಿ ಆಚರಿಸಲು ಸಂಕಲ್ಪಿಸಿರುತ್ತಾರೆ. ತಾವು ಕುಟುಂಬ ಸಮೇತರಾಗಿ ಈ ಸಂದರ್ಭದಲ್ಲಿ ಭಾಗವಹಿಸಿ ಶ್ರೀ ಕಾಮಾಕ್ಷಿ ಶಾರದಾಂಬೆಯ ಕೃಪೆಗೂ ಮಹಾಸ್ವಾಮಿಗಳವರ ಪರಮಾನುಗ್ರಹಕ್ಕೂ ಪಾತ್ರರಾಗಬೇಕಾಗಿ ಕೋರುತ್ತೇವೆ. **-ವಿಶ್ವಸ್ತ ಮಂಡಳಿ, ಶ್ರೀಮಠ, ಹೆಬ್ಬೂರು**

## ಪ್ರಕಟಣೆ

**ಶ್ರೀ ಶಾರದಾ ಪತ್ರಿಕೆಗೆ ಬರಹಗಳನ್ನು ಕಳುಹಿಸುವವರು ಪ್ರತೀ ತಿಂಗಳ 25ನೆಯ ತಾರೀಖಿನೊಳಗಾಗಿ ಸಂಪಾದಕರು, ಶ್ರೀ ಶಾರದಾ ಪತ್ರಿಕೆ, ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-2 ಇಲ್ಲಿಗೆ ಪತ್ರಮುಖೇನ ಅಥವಾ sudarshany@rediffmail.com ಅಥವಾ srisharadaudupi@gmail.comಗೆ ಇ-ಮೇಯ್ಲ್ ಮುಖಾಂತರವೂ ಕಳುಹಿಸಬಹುದು. ಇ-ಮೇಯ್ಲ್‌ಗೆ ಕಳುಹಿಸುವವರು ಅದರ ಪ್ರತಿಯೊಂದನ್ನು PDF Formatನಲ್ಲೂ ಕಳುಹಿಸಿರಿ. ಉದಯೋನ್ಮುಖ ಹಾಗೂ ಮಕ್ಕಳ ಬರಹ/ಚಿತ್ರಗಳಿಗೆ ಸದಾ ಸ್ವಾಗತವಿದೆ. ಬರಹದೊಂದಿಗೆ ಹೆಸರು, ವಿಳಾಸ ಹಾಗೂ ತಮ್ಮ ಭಾವಚಿತ್ರವನ್ನೂ ಕಳುಹಿಸಿರಿ. ಫೋಟೋ, ಚಿತ್ರಗಳು ಹಾಗೂ ಸಣ್ಣ ಬರಹ, ವರದಿಗಳನ್ನು 9845136322 ಫೋನ್ ಸಂಖ್ಯೆಗೆ ವಾಟ್ಸ್ ಆಪ್ (Whatsapp) ಮುಖಾಂತರವೂ ಕಳುಹಿಸಬಹುದು. ಸಮಾಜಬಾಂಧವರು ಪತ್ರಿಕೆಯ ಸದಸ್ಯರಾಗುವ ಮುಖಾಂತರ, ಜಾಹೀರಾತುಗಳು ಹಾಗೂ ಶುಭಾಶಯಗಳು ಹಾಗೂ ಚಿರಸ್ಮರಣೆಗಳನ್ನು ಪ್ರಕಟಿಸುವ ಮೂಲಕ ಪತ್ರಿಕೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ. ಶ್ರೀ ಶಾರದಾ ವೇದಿಕೆಗೆ ಸದಸ್ಯತನ ಶುಲ್ಕ ಇಂತಿದೆ.**

| | | | |
|---|---|---|---|
| ಅಜೀವ ಸದಸ್ಯರು | : ರೂ.500/- | ದಾನಿಗಳು | : ರೂ.1000/- |
| ಪೋಷಕರು | : ರೂ.5000/- | ಮಹಾಪೋಷಕರು | : ರೂ.10000/- |

### ಜಾಹೀರಾತು ದರ

**ಕಲರ್ ಪುಟದ 1/3 ನೇ ಭಾಗ 12 ತಿಂಗಳುಗಳಿಗೆ ರೂ.12000/-**
**ಕಲರ್ ಪುಟದ 1/6 ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ ರೂ.500/-**
**ಕಪ್ಪುಬಿಳುಪು ಪುಟದ 1/6 ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ ರೂ.300/-**
**ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ ರೂ.1200/-**

**ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು. ಅಥವಾ ಸಿಂಡಿಕೇಟ್ ಬ್ಯಾಂಕ್, ಕಾರ್ ಸ್ಟ್ರೀಟ್ ಬ್ರಾಂಚ್ ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್‌ಆಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಡುಪಿ, ಖಾತೆ ಸಂಖ್ಯೆ : 01092200002928 SYNB 0000186**

## ಪುತ್ತಿಗೆ ಪಂಚಾಯತ್ ಉಪಾಧ್ಯಕ್ಷೆಯಾಗಿ ಶ್ರೀಮತಿ ಶುಭಾ ರಾಘವೇಂದ್ರ ಹೆಬ್ಬಾರ್



ಮೂಡುಬಿದ್ರಿ–ಪುತ್ತಿಗೆ ಪಂಚಾಯತ್ ಉಪಾಧ್ಯಕ್ಷೆಯಾಗಿ ಶುಭಾ ರಾಘವೇಂದ್ರ ಹೆಬ್ಬಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಮೇ ತಿಂಗಳಲ್ಲಿ ನಡೆದ ಗ್ರಾಮ ಪಂಚಾಯತ್ ಪುತ್ತಿಗೆ 3 ನೇ ವಾರ್ಡ್‌ನಿಂದ ಸಾಮಾನ್ಯ ಮಹಿಳೆ ಕ್ಷೇತ್ರದಿಂದ ಅತ್ಯಧಿಕ ಮತಗಳಿಂದ ಜಯಗಳಿಸಿ ಮೊದಲ ಬಾರಿಗೆ ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಪ್ರತಿಷ್ಠಿತ ಆಳ್ವಾಸ್ ಶಿಕ್ಷಣ ಸಂಸ್ಥೆಗಳು, ಪುತ್ತಿಗೆ, ಕೊಡ್ಯಡ್ಕ ದೇವಸ್ಥಾನಗಳು ಪುತ್ತಿಗೆ ಪಂಚಾಯತ್ ವ್ಯಾಪ್ತಿಯಲ್ಲಿದ್ದು ಶರವೇಗದಲ್ಲಿ ಬೆಳೆಯುತ್ತಿರುವ ಪಂಚಾಯತ್ ಇದಾಗಿದೆ.

ಪಿ.ಯು.ಸಿ. ಮತ್ತು ಕಂಪ್ಯೂಟರ್ ಡಿಪ್ಲೋಮಾ ಪಡೆದಿರುವ ಇವರು ಮೂಡುಬಿದ್ರೆ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್‌ನ ನಿಕಟಪೂರ್ವ ಕಾರ್ಯದರ್ಶಿ ಕಬ್ಬಿನಾಲೆ ರಾಘವೇಂದ್ರ ಹೆಬ್ಬಾರರ ಧರ್ಮಪತ್ನಿ. ಮೂಡುಬಿದ್ರೆ ವಲಯದಲ್ಲಿ ಸ್ಥಾನಿಕ ಸಮಾಜದಿಂದ ಪಂಚಾಯತ್ ಚುನಾವಣೆಯಲ್ಲಿ ವಿಜಯಿಯಾದ ಮತ್ತು ಪಂಚಾಯತ್ ಉಪಾಧ್ಯಕ್ಷೆಯಾಗಿ ಆಯ್ಕೆಯಾದ ಮೊದಲ ಮತ್ತು ಏಕೈಕ ಮಹಿಳೆ ಎಂಬ ಹೆಗ್ಗಳಿಕೆ ಇವರದ್ದು.

## ನಮ್ಮ ಪ್ರತಿಭಾನ್ವಿತರು

### ಶ್ರೀವತ್ಸ



2014–15ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಚಿ। ಶ್ರೀವತ್ಸ ಇವನು ಶೇ.92.5 ಅಂಕಗಳಿಸಿ ಸಮಾಜಕ್ಕೆ ಕೀರ್ತಿ ತಂದಿರುತ್ತಾನೆ. ಈತ ಮೂಡುಬಿದ್ರೆ ಶ್ರೀ ಸುಬ್ರಹ್ಮಣ್ಯ ರಾವ್ ಮತ್ತು ಶ್ರೀಮತಿ ಅನ್ನಪೂರ್ಣ ದಂಪತಿಗಳ ಪುತ್ರನಾಗಿದ್ದು ಮೂಡುಬಿದ್ರೆ ಜೈನ್ ಹೈಸ್ಕೂಲಿನ ವಿದ್ಯಾರ್ಥಿಯಾಗಿರುತ್ತಾನೆ.

### ದೀಪ್ತಿ ಬಿ.ರಾವ್



2014–15ನೇ ಸಾಲಿನ ಪಿ.ಯು.ಸಿ ಪರೀಕ್ಷೆಯಲ್ಲಿ ಕು। ದೀಪ್ತಿ ಬಿ.ರಾವ್ ಇವಳು ಶೇ.92.5 ಅಂಕಗಳಿಸಿ ಸಮಾಜಕ್ಕೆ ಕೀರ್ತಿ ತಂದಿರುತ್ತಾಳೆ. ಈಕೆ ಮೂಡುಬಿದ್ರೆ ಬಿ.ಸದಾಶಿವ ರಾವ್ ಮತ್ತು ಶ್ರೀಮತಿ ಪ್ರೀತಿ ರಾವ್ ದಂಪತಿಗಳ ಪುತ್ರಿಯಾಗಿದ್ದು ಮೂಡುಬಿದ್ರೆ ಎಕ್ಸಲೆಂಟ್ ಪಿ.ಯು. ಕಾಲೇಜಿನ ವಿದ್ಯಾರ್ಥಿನಿಯಾಗಿರುತ್ತಾಳೆ. ಈಕೆ ಭರತನಾಟ್ಯ ಸೀನಿಯರ್ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿದ್ದು ಹೊಲಿಗೆ ತರಬೇತಿಯನ್ನು ಪಡೆದು ಪಠ್ಯೇತರ ಚಟುವಟಿಕೆಗಳಲ್ಲೂ ಪ್ರತಿಭಾನ್ವಿತಳಾಗಿದ್ದಾಳೆ.

### ತುಷಾರ್ ಗೌತಮ್ ಸಾಂತೂರ್‌ಕರ್



2014–15ನೇ ಸಾಲಿನ ಪಿ.ಯು.ಸಿ ಪರೀಕ್ಷೆಯಲ್ಲಿ ಚಿ।ತುಷಾರ್ ಗೌತಮ್ ಸಾಂತೂರ್‌ಕರ್ ಇವನು ಶೇ.89.5 ಅಂಕಗಳಿಸಿ ಸಮಾಜಕ್ಕೆ ಕೀರ್ತಿ ತಂದಿರುತ್ತಾನೆ. ಈತ ಮೂಡುಬಿದ್ರೆ ಶ್ರೀ ಗೌತಮ್ ಸಾಂತೂರ್‌ಕರ್ ಮತ್ತು ಶ್ರೀಮತಿ ರಂಜನಿ ಸಾಂತೂರ್‌ಕರ್ ದಂಪತಿಗಳ ಪುತ್ರನಾಗಿದ್ದು ಮೂಡುಬಿದ್ರೆ ಅಳ್ವಾಸ್ ಕಾಲೇಜಿನ ವಿದ್ಯಾರ್ಥಿಯಾಗಿರುತ್ತಾನೆ.

### ಶುಭದ ರಾವ್



2014–15ನೇ ಸಾಲಿನ ಪಿ.ಯು.ಸಿ ಪರೀಕ್ಷೆಯಲ್ಲಿ ಕು। ಶುಭದ ರಾವ್ ಇವಳು ಶೇ.85.3 ಅಂಕ ಗಳಿಸಿ ಸಮಾಜಕ್ಕೆ ಕೀರ್ತಿ ತಂದಿರುತ್ತಾಳೆ. ಈಕೆ ಮೂಡುಬಿದಿರೆ ಪುತ್ತಿಗೆ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಮಮತ ದಂಪತಿಗಳ ಪುತ್ರಿಯಾಗಿದ್ದು ಮೂಡುಬಿದಿರೆ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿನಿಯಾಗಿರುತ್ತಾಳೆ.

### ಕು। ಡಾ। ಶೃತಿ




ಮುಂಬೈಯಲ್ಲಿರುವ ಶ್ರೀಮತಿ ರೂಪಾ ಹಾಗೂ ಡಾ। ರಾಜೇಶ್ ರಾವ್ ಇವರ ಸುಪುತ್ರಿ ಡಾ। ಶೃತಿಯು ಎಮ್.ಡಿ (ಸ್ನಾತಕೋತ್ತರ) ಪದವಿಯನ್ನು ಅನಸ್ತೀಶಿಯಾ ವಿಷಯದಲ್ಲಿ ಭಾರತೀಯ ವಿದ್ಯಾಪೀಠ ಯುನಿವರ್ಸಿಟಿ ಪುಣೆಯಿಂದ ಯುನಿವರ್ಸಿಟಿಗೇ ಮೊದಲಿಗಳಾಗಿ ಬಂಗಾರದ ಪದಕದೊಂದಿಗೆ ಪಡೆದುಕೊಂಡಿರುತ್ತಾಳೆ. (Gold Medalist) ಡಾ। ಶೃತಿ ಮುಂಬೈಯಲ್ಲಿರುವ ಡಾ। ರಾಮ ಚಂದ್ರ ರಾವ್ ಹಾಗೂ ಶ್ರೀಮತಿ ವಿಮಲ ರಾವ್ ದಂಪತಿಯ ಮೊಮ್ಮಗಳು.

### ಶ್ರೇಯಾ



ಕಾರ್ಕಳ ಪೆರುವಾಜೆ ಶ್ರೀಕಾಂತ ಮತ್ತು ವಿದ್ಯಾ ಅವರ ಪುತ್ರಿ ಶ್ರೇಯಾ 2014–15 ಸಾಲಿನ ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ 94% ಅಂಕ ಪಡೆದಿರುತ್ತಾಳೆ. ಇವಳು ಕೆನರ ಪಿ.ಯು ಕಾಲೇಜಿನ ವಿದ್ಯಾರ್ಥಿನಿ. ಪ್ರಸ್ತುತ ಮೈಸೂರಿನ ಎಸ್.ಜೆ.ಸಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ದಾಖಲಾತಿ ಹೊಂದಿದ್ದಾಳೆ.

### ಪಿ.ಸುಹಾಸ್ ರಾವ್



ಇತ್ತೀಚೆಗೆ ನಡೆದ ಪಿ.ಯು.ಸಿ ಪರೀಕ್ಷೆಯಲ್ಲಿ ಪಿ.ಸುಹಾಸ್ ರಾವ್ ಶೇಕಡಾ 94 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಶ್ರೀ ಸುಬ್ರಹ್ಮಣ್ಯ ಸಭಾದ ಕೋಶಾಧಿಕಾರಿ ಶ್ರೀ ಪಿ.ಶ್ರೀಕಾಂತ್ ರಾವ್ ಮತ್ತು ಶ್ರೀಮತಿ ಶೈಲಜಾ ರವರ ಸುಪುತ್ರ ಹಾಗೂ ಮಂಗಳೂರಿನ ಶ್ರೀ ಶಾರದಾ ಕಾಲೇಜಿನ ವಿದ್ಯಾರ್ಥಿ.

## ಗ್ರಾಮ ಪಂಚಾಯತ್ ಸದಸ್ಯರಾಗಿ ಸತತ ನಾಲ್ಕನೇ ಬಾರಿ ಆಯ್ಕೆ



ಪಾದೆಬೆಟ್ಟು : ಪಡುಬಿದ್ರಿ ಗ್ರಾಮ ಪಂಚಾಯತಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಪಾದೆಬೆಟ್ಟು ಗ್ರಾಮದಿಂದ ಸತತ 4ನೇ ಬಾರಿಗೆ ದಿ। ರಾಮ ಶರ್ಮರವರ ಮಗ ಶ್ರೀನಿವಾಸ ಶರ್ಮರು ಆಯ್ಕೆ ಆಗಿದ್ದಾರೆ. ಅಲ್ಲದೆ ಗ್ರಾಮ ಪಂಚಾಯತಿನ 34 ಸದಸ್ಯರಲ್ಲಿ ಅತ್ಯಧಿಕ 495 ಮತಗಳನ್ನು ಗಳಿಸಿರುತ್ತಾರೆ. ಶ್ರೀಯುತರು ಪಂಚಾಯತಿನ 2005ರಲ್ಲಿ ಉಪಾಧ್ಯಕ್ಷರಾಗಿಯೂ ಆಯ್ಕೆಯಾಗಿರುತ್ತಾರೆ. ಭಾರತೀಯ ಜನತಾ ಪಕ್ಷದ ಕಾಪು ವಿಧಾನಸಭಾ ಕ್ಷೇತ್ರದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

## ಕಟಪಾಡಿ ಗ್ರಾಮ ಪಂಚಾಯತ್ ಸದಸ್ಯರಾಗಿ ಶ್ರೀ ಅಶೋಕ ರಾವ್



ದಿ। ರಾಮಕೃಷ್ಣ ರಾವ್ ಹಾಗೂ ದಿ। ಗಿರಿಜಮ್ಮ ಇವರ ಪುತ್ರರಾದ ಕಟಪಾಡಿ ಗ್ರಾಮ ಪಂಚಾಯತ್ ಸದಸ್ಯರಾಗಿ ಶ್ರೀ ಅಶೋಕ ರಾವ್ ಕಟಪಾಡಿ ಚುನಾಯಿತರಾಗಿರುತ್ತಾರೆ. ಇವರು ಕಟಪಾಡಿ ಸಿ.ಎ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರೂ, ಕಟಪಾಡಿ ಹಾಲು ಉತ್ಪಾದಕರ ಸಂಘ (ನಿ) ಇದರ ಆಡಳಿತ ಮಂಡಳಿಯ ನಿರ್ದೇಶಕರೂ ಆಗಿರುತ್ತಾರೆ.

## ಆರೂರು ಗುರುರಾಜ ರಾವ್



ಆರೂರು ಲಾಲಿ ಸುಬ್ರಹ್ಮಣ್ಯ ರಾವ್ ಇವರ ಪುತ್ರರಾದ ಆರೂರು ಗುರುರಾಜ ರಾವ್ ಇವರು ಗ್ರಾಮ ಪಂಚಾಯತ್ ಸದಸ್ಯರಾಗಿ ಚುನಾಯಿತರಾಗಿರುತ್ತಾರೆ. ಇವರು ವೃತ್ತಿಯಲ್ಲಿ ಇಂಜಿನಿಯರ್ ಆಗಿರುತ್ತಾರೆ. ಇವರು ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರು.

## ಕುಂದಾಪುರ ದ್ರಾವಿಡ ಬ್ರಾಹ್ಮಣ ಸಭಾದ ಅಧ್ಯಕ್ಷರಾಗಿ ಶ್ರೀ ಗಣೇಶ್ ರಾವ್ ಕುಂಭಾಶಿ



ಶ್ರೀ ಗಣೇಶ್ ರಾವ್ ಕುಂಭಾಶಿಯವರು ಮುಂದಿನ ವರ್ಷದ ಅವಧಿಗೆ ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಸಭಾ, ಕುಂದಾಪುರ ಇದರ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಇವರು ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ ಇದರ ಅಧ್ಯಕ್ಷರಾಗಿದ್ದರು. ಈಗ ಗೌರವಾಧ್ಯಕ್ಷರಾಗಿದ್ದಾರೆ. ಇವರು ಸ್ಥಾನಿಕ ಒಕ್ಕೂಟ ಮಹಾಸಭಾದ ಉಪಾಧ್ಯಕ್ಷರಾಗಿ ಹಾಗೂ ಶ್ರೀಶಾರದಾ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ ಕೋಟೇಶ್ವರ ಇದರ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

## ....ಡಾ। ಸುದರ್ಶನ್ ಹೆಬ್ಬಾರ್

■...4ನೇ ಪುಟದಿಂದ



ಅವರು ಭಾನುವಾರ ಮುನಿಯಾಲು ಮಾರಿಯಮ್ಮ ದೇವಸ್ಥಾನದ ವಠಾರದಲ್ಲಿ ಹಮ್ಮಿಕೊಂಡ 2.75 ಲಕ್ಷ ವೆಚ್ಚದ ದಾರಿದೀಪ ಯೋಜನೆ ಹಾಗೂ ಸ್ವಚ್ಛ ಗ್ರಾಮ ಯೋಜನೆಗೆ ಚಾಲನೆ ನೀಡಿ, 2015–16ನೇ ಸಾಲಿನ ಡಾ। ಸುದರ್ಶನ ಹೆಬ್ಬಾರ್ ನೇತೃತ್ವದ ನೂತನ ತಂಡಕ್ಕೆ ಪದಗ್ರಹಣ ನೆರವೇರಿಸಿ ಮಾತನಾಡಿದರು.

ಕ್ಲಬ್‌ನ ನೂತನ ಅಧ್ಯಕ್ಷ ಡಾ। ಸುದರ್ಶನ ಹೆಬ್ಬಾರ್ ಅಧ್ಯಕ್ಷತೆ ವಹಿಸಿ ತಮ್ಮ ಅವಧಿಯಲ್ಲಿ ಕೈಗೊಳ್ಳುವ ಸೇವಾಕಾರ್ಯಗಳ ವಿವರ ನೀಡಿದರು.

## ವಿದೇಶ ಪ್ರಯಾಣ



ಹೊಸಪೇಟೆಯಲ್ಲಿ ವಾಸ್ತವ್ಯದಲ್ಲಿರುವ ಎಂ.ಗುರುಪ್ರಸಾದ ರಾವ್ ಮತ್ತು ಸುಕನ್ಯಾ ಬನ್ನಂಜೆ ಇವರ ಸುಪುತ್ರ ಎಂ.ಸುದೀಪ್ ಇವರು ಪ್ರಸ್ತುತ ಬೆಂಗಳೂರಿನ ಇನ್‌ಫಾರ್ಮೆಟಿಕಾ (Informatic Business solution) ಸಂಸ್ಥೆಯ ಉದ್ಯೋಗಿಯಾಗಿದ್ದು, ಸಂಸ್ಥೆಯ ವತಿಯಿಂದ ಕ್ಯಾಲಿಪೋರ್ನಿಯಕ್ಕೆ ಎರಡು ತಿಂಗಳ ಕಾಲಾವಧಿಗಾಗಿ ಪ್ರಯಾಣ ಬೆಳೆಸಲಿದ್ದಾರೆ. ಬಳ್ಳಾರಿ ಶ್ರೀನಿವಾಸ ರಾಯರ ಪೌತ್ರರಾಗಿರುವ ಇವರು ಧಾರವಾಡದ ಎಸ್‌ಡಿಎಮ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ. ಪದವಿ ಪಡೆದಿರುತ್ತಾರೆ. ಇವರಿಗೆ ಸಮಾಜದ ಶುಭ ಹಾರೈಕೆಗಳು.

## ಸನ್ಮಾನ



ಮಂಗಳೂರಿನ ಕೆನರಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಂಶುಪಾಲರು ಹಾಗೂ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥರಾಗಿ ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಪ್ರೊ। ಟಿ.ಎನ್. ಶ್ಯಾನುಭಾಗ್‌ರವರನ್ನು ತಾ.30–06–2015ರಂದು ಸಂಸ್ಥೆಯ ವತಿಯಿಂದ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಎನ್. ಕಾಮತ್ ಹಾಗೂ ಉಪಾಧ್ಯಕ್ಷರಾದ ಶ್ರೀ ಎಮ್.ಅಣ್ಣಪ್ಪ ಶೆಣೈರವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಎಮ್.ರಂಗನಾಥ ಭಟ್, ಸಂಚಾಲಕರಾದ ಶ್ರೀ ಎಮ್.ಪಿ.ಪೈ, ನೂತನ ಪ್ರಾಂಶುಪಾಲರಾದ ಡಾ। ಗಣೇಶ್ ವಿ.ಭಟ್ ಉಪಸ್ಥಿತರಿದ್ದರು. ಪ್ರೊ। ಟಿ.ಎನ್.ಶಾನುಭಾಗ್‌ರವರು 30 ವರ್ಷಗಳ ತಾಂತ್ರಿಕ ಅನುಭವ ಹಾಗೂ 10 ವರ್ಷಗಳ ಶೈಕ್ಷಣಿಕ ಅನುಭವ ಹೊಂದಿರುತ್ತಾರೆ. ಅವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಯಕ್ಷಾಯನ–2015.....

■...4ನೇ ಪುಟದಿಂದ



ಪಟ್ಲ–ಭಾಗವತರಾಗಿದ್ದರು. ಗುರುಪ್ರಸಾದ್, ಚಂದ್ರಶೇಖರ್ ಭಟ್ ಕೊಂಕಣಾಜೆ– ಚೆಂಡೆ – ಮೃದಂಗದಲ್ಲಿದ್ದರು.

ದಿನಾಂಕ 5 –07–2015 ರಂದು "ಹಿರಣ್ಯಾಕ್ಷ–ಹಿರಣ್ಯಾಕ್ಷ–ಹಿರಣ್ಯಾಕ್ಷ "....ಇದು ಮತ್ತೊಂದು ಬಗೆಯ ಪ್ರಯೋಗ. ಪರಂಪರಾಗತ, ಪ್ರಯೋಗ ಸಿದ್ಧ ಆಖ್ಯಾನವನ್ನು ಬೇರೆ – ಬೇರೆ ಕಲಾವಿದರು ಮೂರು ಬಾರಿ ಮಾಡಿ ತೋರಿಸುವುದು. ನಡೆ – ಕಥೆ ಅದೇ. ಹಾಗೆಂದು ಸ್ಪರ್ಧೆಯಲ್ಲಿ ಮಾನ್ಯ ಸಂತೋಷ್, ನಿಡ್ಲೆ ಗೋವಿಂದ ಭಟ್, ಜಗಧಾಭಿರಾಮ ಪಡುಬಿದ್ರಿಯವರ ಹಿರಣ್ಯಾಕ್ಷ, ಪಶುಪತಿ ಶಾಸ್ತ್ರಿ, ಮಹಾವೀರ ಪಾಂಡಿ, ಪದ್ಮನಾಭಗೌಡರ ನಾರದ, ಕೆದಿಲ ಜಯರಾಮ ಭಟ್, ಪ್ರಶಾಂತ್ ನೆಲ್ಯಾಡಿ, ದೇವಾನಂದ ಭಟ್ಟರ ಭೂದೇವಿ, ಅಬ್ಬರದ ವರಾಹನಾಗಿ ಸತೀಶ್ ನೈನಾಡು, ಮಿಜಾರು ಬಾಲಕೃಷ್ಣ, ಹರೀಶ್ ಮಣ್ಣಾಪು ವಿಜೃಂಭಿಸಿದರು. ಇವರಿಗೆ ಸತೀಶ್ ಶೆಟ್ಟಿ ಬೊಂದೇಲ್, ಹೊಸಮೂಲೆ ಗಣೇಶ್ ಭಟ್, ಹಿರಿಯ ಭಾಗವತ ಕುರಿಯ ಗಣಪತಿ ಶಾಸ್ತ್ರಿ – ಭಾಗವತರು ದೇಲಂತ ಮಜಲು ಸುಬ್ರಹ್ಮಣ್ಯ ಭಟ್, ಯೋಗೀಶ್ ಉಳೆಪ್ಪಾಡಿ, ಪ್ರಶಾಂತ್ ವಗೆನಾಡು ಕುಸುಮಾಧರ ಮುಡಿಪು, ಅಡೂರು ಗಣೇಶರಾವ್, ಪದ್ಮನಾಭ ಉಪಾಧ್ಯ (ದ್ವಂದ್ವ ಚಂಡೆ) ಹಿಮ್ಮೇಳದಲ್ಲಿದ್ದರು.

ಐದು ದಿನಗಳಲ್ಲೂ ತುಂಬಿತುಳುಕಿದ ಸಭೆ, ಅಚ್ಚುಕಟ್ಟಿನ ಕಾರ್ಯಕ್ರಮ ಗಣ್ಯರ ಉಪಸ್ಥಿತಿ, ಧ್ವನಿ– ಬೆಳಕಿನ ಸೊಗಸಾದ ನಿರ್ವಹಣೆ ಮಾದರಿ ಎಂಬಂತೆ ರೂಪುಗೊಂಡಿದ್ದು– ಮೂಡುಬಿದಿರೆಯ ಹಿರಿಯರಲ್ಲೊಬ್ಬರಾದ ಕೆ.ಶ್ರೀಪತಿ ಭಟ್ಟರ ಗೌರವಾಧ್ಯಕ್ಷತೆ ದೇವಾನಂದ ಭಟ್ಟರ ಯೋಚನೆ– ಯೋಜನೆ–ಅವರ ಸಹವರ್ತಿಗಳ ಸಹಕಾರ. ಒಟ್ಟಂದದಲ್ಲಿ ಅಂದವಾದ ಕಾರ್ಯಕ್ರಮವಾಯಿತು.

ವರ್ಷ ವರ್ಷವೂ ಇಂತಹ ನೂತನವನ್ನು ಸೃಷ್ಟಿಸುತ್ತಾ ಪ್ರದರ್ಶಿಸುತ್ತಾ ಮತ್ತೊಂದಿಷ್ಟನ್ನು ಹುಡುಕುತ್ತಾ ಹೊಸ–ಹೊಸಯಾನವನ್ನು ಶೋಧಿಸುವ ಶ್ರೀ ದೇವಾನಂದ ಭಟ್ಟರನ್ನು ಅಭಿನಂದಿಸಿ – ಭವಿಷ್ಯಕ್ಕೆ ಶುಭ ಹಾರೈಸೋಣ

"ಯಕ್ಷಗಾನಂ ಗೆಲ್ಗೆ"

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ಆಟಿತೊ ಆಟ ಕೂಟ"



ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ಇತ್ತೀಚೆಗೆ "ಆಟಿತೊ ಆಟ ಕೂಟ" ಎಂಬ ವಿಶಿಷ್ಟ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು. ಬೆಳಿಗ್ಗೆ ಶ್ರೀ ಸಭಾದ ಯುವ ವೇದಿಕೆ, ಮಹಿಳಾ ವೇದಿಕೆ ಹಾಗೂ ಇತರ ಪದಾಧಿಕಾರಿಗಳು ಚೆನ್ನೆಮಣೆ ಸ್ಪರ್ಧೆಯನ್ನು ಆರಂಭಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ಸಮಾಜ ಭಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಬಹುಮಾನ ಪಡೆದರು. ಇದರೊಡನೆ ಎರಡು ವಿಭಾಗದಲ್ಲಿ ಕೇರಂ ಪಂದ್ಯಾಟವನ್ನು ಆಯೋಜಿಸಲಾಗಿತ್ತು. ಶ್ರೀ ಸಿ. ರಾಘವೇಂದ್ರ ರಾವ್ ಮತ್ತು ಶ್ರೀ ಜಯಚಂದ್ರ ಬಿ. ರವರು ತೀರ್ಪುಗಾರರಾಗಿ ಸಹಕರಿಸಿದರು. ಆಟಿಯ ವಿಶೇಷ ಖಾದ್ಯಗಳೊಂದಿಗೆ ಮಧ್ಯಾಹ್ನದ ಭೋಜನವನ್ನು ಉಣಬಡಿಸಲಾಯಿತು. ಮಧ್ಯಾಹ್ನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಮತಿ ಸ್ನೇಹಲತಾ ದಿವಾಕರ ಆಟಿಯ ಮಹತ್ವ, ಆಟಿಯ ಬಗೆಗಿನ ಸ್ವರಚಿತ ಕವನಗಳನ್ನು ವಾಚಿಸಿದರು. ನಂತರ ಸಮಾಜದ ಯುವ ಪ್ರತಿಭೆಗಳಿಂದ ಕರೋಕೆ ರಸಮಂಜರಿ ನಡೆಯಿತು. ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಕುಸುಮ ನವೀನ್ ಕುಮಾರ್ ಹಾಗೂ ಯುವ ವೇದಿಕೆಯ ಶ್ರೀ ಸುರೇಶ್ ಕಡಬ ಕಾರ್ಯಕ್ರಮ ಸಂಯೋಜಿಸಿದರೆ, ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರ್ವಹಿಸಿದರು.

ಚಿತ್ರ : **ರಘುವೀರ್ ಪೆರ್ಡೂರ್**

ವರದಿ : **ಶ್ರೀ ಪಿ ಶ್ರೀಕಾಂತ್ ರಾವ್**

## ಶ್ರೀ ಆದಿ ಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು ಮೂಡುಬಿದಿರೆ ಇದರ ಮಹಾಸಭೆ



ತಾ.28–06–2015ನೇ ರವಿವಾರ ಮೂಡುಬಿದಿರೆ ಸಮಾಜ ಮಂದಿರದಲ್ಲಿ ಸಂಘದ ಬೆಳ್ಳಿ ಹಬ್ಬ ಸಮಾರಂಭವು ನಡೆಯಿತು. ದೊಡ್ಡಮನೆ ಶ್ರೀ ಚಂದ್ರ ಶೇಖರ ದೇವಸ್ಥಾನದ ಅರ್ಚಕ ಶ್ರೀ ರತ್ನಾಕರ ಭಟ್ ದೊಡ್ಮನೆ ಇವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಬಿ. ಚಂದ್ರಶೇಖರ ರಾಯರು ವಹಿಸಿದ್ದರು. ಪ್ರಧಾನ ಅಭ್ಯಾಗತರಾಗಿ ಸ್ಥಾನಿಕ ಬ್ರಾಹ್ಮಣ ಸಂಘ ಪಡುಬಿದ್ರಿ ಇದರ ಅಧ್ಯಕ್ಷರಾದ ಶ್ರೀ ಎಂ.ಕೆ.ಮೋಹನ ರಾಯರೂ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಉಡುಪಿ ಇದರ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಪ್ರಫುಲ್ಲ ಚಂದ್ರ ರಾಯರು ಆಗಮಿಸಿದ್ದರು.

ವಯೋ ವೃದ್ಧರೂ, ಜ್ಞಾನ ವೃದ್ಧರೂ ಆದ ಶ್ರೀಮತಿ ಮಾರ್ಪಳ್ಳಿ ಸತ್ಯಭಾಮ ಗೋಪಾಲಕೃಷ್ಣಯ್ಯ ಇವರಿಗೆ ಶ್ರೀ ಬಿ. ಚಂದ್ರಶೇಖರ ರಾಯರು ಮತ್ತು ಉಪಾಧ್ಯಕ್ಷೆ ಶ್ರೀಮತಿ ಮಲ್ಲಿಕಾ ಗಣೇಶ್ ರಾವ್‌ರವರು ಶಾಲು ಹೊದಿಸಿ, ಪುಷ್ಪಗುಚ್ಛ, ಸ್ಮರಣಿಕೆ, ಸನ್ಮಾನ ಪತ್ರವನ್ನು ನೀಡಿ ಸನ್ಮಾನಿಸಿದರು.

ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಶ್ರೀ ಬಿ. ಜಯರಾಮ ರಾಯರನ್ನು ಅಧ್ಯಕ್ಷರು ಮತ್ತು ಪ್ರಧಾನ ಅಭ್ಯಾಗತರು ಹಾರ, ಶಾಲು ಹಾಕಿ ಸ್ಮರಣಿಕೆ ನೀಡಿ ಅಭಿನಂದಿಸಿದರು.

ಅತ್ಯಧಿಕ ಮತಗಳಿಂದ ಚುನಾಯಿತರಾದ ಪುತ್ತಿಗೆ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಶ್ರೀಮತಿ ಶುಭಾ ರಾಘವೇಂದ್ರ ಹೆಬ್ಬಾರ್ ಇವರನ್ನು ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ವೀಣಾ ದೇವಾನಂದ ಭಟ್‌ರವರು ಹಾರ, ಶಾಲು ಹೊದಿಸಿ ಸ್ಮರಣಿಕೆಯನ್ನು ನೀಡಿ ಅಭಿನಂದಿಸಿದರು.

ಸಂಘದ ನಿಕಟ ಪೂರ್ವ ಅಧ್ಯಕ್ಷ ಶ್ರೀ ದೇವಾನಂದ ಭಟ್ ಸ್ವಾಗತಿಸಿದರೆ ಶ್ರೀ ಪಿ.ಶ್ರೀನಿವಾಸ ರಾಯರು ಧನ್ಯವಾದ ವನ್ನು ಸಮರ್ಪಿಸಿದರು. ಶ್ರೀ ಬಿ.ಗಣೇಶ ರಾಯರು ಸಂದೇಶ ವಾಚನವನ್ನು ಮಾಡಿದರು. ಶ್ರೀ ವಾದಿರಾಜ ರಾಯರು ಲೆಕ್ಕ ಪತ್ರವನ್ನು ಮಂಡಿಸಿದರು. ಕು| ಮೇಘನಾ ಮತ್ತು ಕು| ಶುಭಾಂಜನ ಇವರು ಪ್ರಾರ್ಥನೆಯೊಂದಿಗೆ ಕಾರ್ಯ ಕ್ರಮವು ಪ್ರಾರಂಭವಾಯಿತು. ಶ್ರೀ ಯಂ. ಜಗದೀಶ ರಾವ್ ವರದಿಯನ್ನು ಮಂಡಿಸಿದರು. ಬಿ.ಚಂದ್ರಶೇಖರ ರಾಯರು ಪ್ರತಿ ವರ್ಷದಂತೆ ಈ ವರ್ಷವೂ ಚಿ| ಶ್ರೀವತ್ಸ, ಕು| ದೀಪ್ತಿ ಬಿ. ರಾವ್, ಚಿ| ತುಷಾರ್ ಗೌತಮ್ ಸಾಂತೂರ್‌ಕರ್, ಚಿ| ರಾಯಿ ರಂಜಿತ್ ಕುಮಾರ್, ಕು| ಶುಭದ ರಾವ್ ಇವರಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಿದರು.

ವಿದ್ಯಾರ್ಥಿ ವೇತನ ನಿಧಿಗಾಗಿ ದೇಣಿಗೆ ನೀಡಿದ ಶ್ರೀ ದೇವಾನಂದ ಭಟ್, ಶ್ರೀಯುತ ಕುಮಾರ ಸ್ವಾಮಿ, ಶ್ರೀ ಸೂರ್ಯನಾರಾಯಣ ರಾವ್, ಶ್ರೀ ರತ್ನಾಕರ ಭಟ್ ಮತ್ತು ಶ್ರೀ ದಿವಾಕರ ರಾವ್ ಪಡುಬಿದ್ರೆ ಇವರನ್ನು ವೇದಿಕೆಗೆ ಕರೆತಂದು ಶಾಲು, ಹೊದಿಸಿ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಸಭಾ ಕಾರ್ಯಕ್ರಮದ ನಂತರ ಕು| ಮೇಘನಾ, ಕು| ದೀಪ್ತಿ, ಚೈತ್ರಾ, ಕು| ಶುಭಾಂಜನ, ಕು| ಶ್ರೀಜ, ಕು| ಪ್ರಣವಿ ಇವರಿಂದ ನೃತ್ಯ ವೈಭವ ನಡೆಯಿತು. ಇವರಿಗೆ ಸಂಘದ ಗೌರವಾಧ್ಯಕ್ಷರಾದ ಶ್ರೀ ಬಿ.ಕೃಷ್ಣರಾಜ ರಾವ್‌ರವರು ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮವನ್ನು ಶ್ರೀ ರಾಘವೇಂದ್ರ ಹೆಬ್ಬಾರ್ ನಿರೂಪಿಸಿದರೆ, ಸಭಾ ಕಾರ್ಯಕ್ರಮವನ್ನು ಶ್ರೀ ರಾಯಿ ರಂಜಿತ್ ಕುಮಾರ್ ಚೊಕ್ಕವಾಗಿ ನಿರೂಪಿಸಿ ಸಭಿಕರ ಅಭಿನಂದನೆಗೆ ಪಾತ್ರರಾದರು.

ವರದಿ : **ಎಮ್.ಜಗದೀಶ ರಾವ್**

# ಚಿಣ್ಣರ ಅಂಗಳ



**ಪ್ರಣವ್ ರಾವ್,**
**1ನೇ ವರ್ಷ, ಪರ್ರಮಟ್ಟ ಪಬ್ಲಿಕ್ ಸ್ಕೂಲ್, ಸಿಡ್ನಿ**




**ಬಿ.ಕೆ. ಪ್ರದ್ಯುಮ್ನ ರಾವ್, 6–ಎ, ಸೈಂಟ್ ಮೇರಿಸ್ ಸ್ಕೂಲ್, ಲಾಯಿಲ, ಬೆಳ್ತಂಗಡಿ**



**ಪ್ರಜ್ವಲ್ ರಾವ್, 6ನೇ ತರಗತಿ,**
**ಲಿಟ್ಲ್‌ರಾಕ್ ಇಂಡಿಯನ್ ಸ್ಕೂಲ್, ಬ್ರಹ್ಮಾವರ**

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org